ಜನಪದ ಸೇವಾ ಟ್ರಸ್ಟ್ ಪ್ರಕಟಣೆ

ಜನಪದ ವಿಚಾರ

ವೈಚಾರಿಕ ತಿಂಗಳ ಡೈಜೆಸ್ಟ್

ಸಂಪುಟ ೨ ನವೆಂಬರ್, ೨೦೦೧ ಸಂಚಿಕೆ ೪

ಆಫಘಾನ ಯುದ್ಧದ ಪರಿಣಾಮಗಳು

★

ಹೊಸ ಸಮಾಜ ನಿರ್ಮಾಣದ ಪ್ರತಿಪಾದಕ
ಜಯಪ್ರಕಾಶ ನಾರಾಯಣ

★

ರೈತರ ಆತ್ಮಹತ್ಯೆಗೆ ಇಡೀ ಸಮಾಜವೇ ಹೊಣೆ

★

ನಮ್ಮ ಪೂರ್ವಜರ ರಾಜನೀತಿ ಶಾಸ್ತ್ರ

★

ಭಾರತದ ನಿರ್ಮಾಣದ ಕಥೆ ಇತಿಹಾಸದ ಪುಟಗಳಿಂದ

★ ಈ ಸಂಚಿಕೆಯಲ್ಲಿ ★

ಜನಪದ ವಿಚಾರ

ವೈಚಾರಿಕ ತಿಂಗಳ ಡೈಜೆಸ್ಟ್

ಸಂಪುಟ : ೨ ಸಂಚಿಕೆ : ೪

ನವೆಂಬರ್ ೨೦೦೧

ಸಂಪಾದಕ

ಸುರೇಂದ್ರ ಕೌಲಗಿ

ಸಲಹಾ ಸಮಿತಿ,
ಜನಪದ ಸೇವಾ ಟ್ರಸ್ಟ್
ಧರ್ಮದರ್ಶಿ ಮಂಡಳಿ

....

ಚಂದಾ ವಿವರ :

ವಾರ್ಷಿಕ : ರೂ. ೧೦೦/-
ಅರ್ಧವಾರ್ಷಿಕ : ರೂ. ೫೦/-
ಬಿಡಿ ಸಂಚಿಕೆ : ರೂ. ೧೦/-

ಸಂಪರ್ಕ ವಿಳಾಸ :

ಜನಪದ ಸೇವಾ ಟ್ರಸ್ಟ್ (ರಿ.)
ಕಲ್ಯಾಣಿ ಬೀದಿ,
ಮೇಲುಕೋಟೆ
ಜಿಲ್ಲಾ : ಮಂಡ್ಯ. ೫೭೧ ೪೩೧.

ದೂರವಾಣಿ: ೦೮೨೩೬ ೪೮೭೫೪

ಹಿಂದೂ ಮುಸ್ಲಿಂ ಸಿಖ್ಖರ
ಮಧ್ಯೆ ಮನುಷ್ಯರನ್ನು
ಹುಡುಕಿಕೊಳ್ಳುತ್ತೇನೆ.

ಗುಲಾಬಿ ನಗುವಾಗಲೆಲ್ಲ
ಮುಳ್ಳುಗಳು ತಾಗದಂತೆ
ನೋಡಿಕೊಳ್ಳುತ್ತೇನೆ.

ಮತೀಯ ಜ್ವಾಲೆಯಲ್ಲಿ
ಆತ್ಮಗಳನ್ನೇ ಸುಡದಿರಿ ಎಂದು
ಕೇಳಿಕೊಳ್ಳುತ್ತೇನೆ.

ಶಾಂತಿಯು ಎಡಬಿಡದೆ
ಎಲ್ಲೆಡೆ ಗಸ್ತು ತಿರುಗು ಎಂದು
ಬೇಡಿಕೊಳ್ಳುತ್ತೇನೆ.

ಧರ್ಮಗಳ ಹೆಸರಲ್ಲಿ
ಧ್ವಂಸ ಮಾಡುವ ರಾಕ್ಷಸರನ್ನು
ವಿಚಾರಿಸಿಕೊಳ್ಳುತ್ತೇನೆ.

ಜಾತಿ ಕುರುಹು ಕಳಕೊಂಡು
ಅರಿವಿನಲ್ಲಿ ಒಂದಾಗಿ ಎಂದು
ತೋಡಿಕೊಳ್ಳುತ್ತೇನೆ.

ದ್ವೇಷದ ದಳ್ಳುರಿಯಲ್ಲೂ
ಪ್ರೀತಿಯೊಡನೆ ಮಾತ್ರ
ರಾಜಿ ಮಾಡಿಕೊಳ್ಳುತ್ತೇನೆ.

– ರಂಜಾನ್ ದರ್ಗಾ

ಚಂದಾದಾರರಲ್ಲಿ :–
ಚಂದಾ ಕಳುಹಿಸಿರುವ ಓದುಗರಿಗೆ ಕೃತಜ್ಞತೆಗಳು. **– ಪ್ರಕಾಶಕರು**

ವಿಚಾರ ದೀಪ್ತಿ.......

ನಮ್ಮ ರಾಜಕೀಯ ವ್ಯಕ್ತಿಗಳೂ ಒಂದು ರೀತಿ ಸೊಳ್ಳೆ ಇದ್ದಹಾಗೆಯೇ. ತಮ್ಮ ಕರ್ತವ್ಯವನ್ನು ಮರೆತು ಎಲ್ಲೆಂದರಲ್ಲಿ ಸೊಳ್ಳೆಯ ಹಾಗೆ ತಿರುಗುತ್ತಾರೆ. ಈ ರಾಜಕೀಯ ಸೊಳ್ಳೆಗಳು ಎಲ್ಲಿ ಬಂದರೂ ಸಮಸ್ಯೆಯೇ. ಸೊಳ್ಳೆ ಕಡಿದರೆ ಬರುವ ರೋಗವನ್ನು ಆಸ್ಪತ್ರೆಗೆ ಹೋಗಿ ವಾಸಿಮಾಡಿಕೊಳ್ಳಬಹುದು. ಆದರೆ ಈ ರಾಜಕೀಯದ ವಿಶೇಷ ಸೊಳ್ಳೆಗಳು ಹರಡುವ ಕಾಯಿಲೆಯನ್ನು ಗುಣಪಡಿಸಲು ಸಾಧ್ಯವೇ? ಈ ರಾಜಕೀಯ ಸೊಳ್ಳೆಗಳು ಮಾಡುವ ಕೆಲಸಗಳು ಒಂದೇ, ಎರಡೇ, ಒಟ್ಟಾರೆ ಸಮಾಜವನ್ನು ಅಧೋಗತಿ ಕಾಣಿಸುವುದರಲ್ಲಿ ಪ್ರಮುಖ ಪಾತ್ರವಹಿಸುತ್ತವೆ. ಈ ವಿಶೇಷ ಸೊಳ್ಳೆಗಳನ್ನು ನಾಶಪಡಿಸುವುದಾದರೂ ಹೇಗೆ? ಇತ್ತೀಚೆಗೆ ವೈಜ್ಞಾನಿಕವಾಗಿ ಒಂದು ಸೊಳ್ಳೆಯನ್ನು ಕಂಡುಹಿಡಿದು ಅದು ಸಾಮಾನ್ಯ ಸೊಳ್ಳೆಯನ್ನು ತಿಂದು ಹಾಕುವಂತೆ ಮಾಡಿದ್ದಾರೆ. ಇಂದು ವಿಜ್ಞಾನ ಮುಂದುವರೆದು ರೋಬಾಟ್, ಕಂಪ್ಯೂಟರ್‌ಗಳಂತಹ ಮನುಷ್ಯರನ್ನು ಕಂಡುಹಿಡಿದಿದ್ದಾರೆ. ಆದರೆ ನಮ್ಮ ದುಷ್ಟ ರಾಜಕೀಯ ವ್ಯಕ್ತಿಗಳನ್ನು ತಿಂದುಹಾಕುವಂತಹ ಒಂದು ಯಂತ್ರಮಾನವನನ್ನು ಇನ್ನು ಕಂಡುಹಿಡಿಯಲಿಲ್ಲವಲ್ಲಾ ಎಂಬ ಚಿಂತೆ ನನ್ನನ್ನು ಕಾಡುತ್ತಿದೆ.

ನಮ್ಮ ಸರ್ಕಾರಿ ನೌಕರರೂ ಒಂದು ರೀತಿಯ ಸೊಳ್ಳೆಗಳಿದ್ದಂತೆಯೇ, ಕೆಲವರು ಅನಾಫಲೀಸ್ ಸೊಳ್ಳೆಗಳಂತಿದ್ದರೆ, ಕೆಲವರು ಕ್ಯುಲೆಕ್ಸ್ ಸೊಳ್ಳೆಗಳಂತೆ ಇರುತ್ತಾರೆ. ಸರ್ಕಾರದ ಹಣ ಸರ್ಕಾರಕ್ಕೆ ಸೇರದೆ ಮಧ್ಯದಲ್ಲಿ ಕುಲೆಕ್ಸ್ ಸೊಳ್ಳೆಗಳು ತಮ್ಮ ಕಾರ್ಯ ಮುಗಿಸಿ ಸುಮ್ಮನಿದ್ದರೆ ಈ ಅನಾಫಲೀಸ್ ಸೊಳ್ಳೆಗಳು ತಾವು ಹಣ ನುಂಗಿದ್ದಲ್ಲದೆ ಇತರ ಸಹಪಾಟಿಗಳಿಗೂ ವಿಧವಿಧವಾಗಿ ಸರ್ಕಾರವನ್ನು ವಂಚಿಸುವ ರೀತಿಯನ್ನು ಪ್ರಸಾರಮಾಡಲು ತಸ್ನ ಕೈಲಾದ ಪ್ರಯತ್ನವನ್ನು ಮಾಡುತ್ತವೆ. ಇನ್ನಾದರೂ ವಿಜ್ಞಾನಿಗಳು ಈ ತರಹದ ಸೊಳ್ಳೆಗಳ ನಾಶಕ್ಕೆ ಉಪಾಯ ಕಂಡುಹಿಡಿಯಬಾರದೇಕೆ?

– ಆಲ್ಫೋನ್ಸ್ ಪಿಂಟೋ

ಆಫಘಾನ ಯುದ್ಧದ ಪರಿಣಾಮುಗಳು

- ಸುರೇಂದ್ರ ಕೌಲಗಿ

ಆಫಘಾನ ಯುದ್ಧ ಪ್ರಾರಂಭವಾಗಿ ಇನ್ನೇನು ಒಂದು ತಿಂಗಳು ಆಗಲಿದೆ. ಈ ಅವಧಿಯಲ್ಲಿ ಒಂದು ಸಾವಿರಕ್ಕೂ ಹೆಚ್ಚು ಆಫಘಾನ ಪ್ರಜೆಗಳು ಸತ್ತಿದ್ದಾರೆ, ಎಷ್ಟೋ ಸಾವಿರ ಜನರು ನಿರಾಶ್ರಿತರಾಗಿ ಪಾಕಿಸ್ತಾನದೊಳಗೆ ನುಗ್ಗುತ್ತಿದ್ದಾರೆ, ನೂರಾರು ಕಟ್ಟಡಗಳು ನಾಶವಾಗಿವೆ; ಸಾರಿಗೆ ಸಂಪರ್ಕ, ವಿದ್ಯುತ್ ಶಕ್ತಿ, ಅಸ್ಪತ್ರೆ ಇತ್ಯಾದಿ ನಾಗರಿಕ ಸೇವೆಗಳು ಇಲ್ಲದಂತಾಗಿವೆ; ಆಹಾರ ಸಾಮುಗ್ರಿಗಳ ಕೊರತೆಯುಂಟಾಗಿದೆ; ಊಹಿಸಲಾಗದ ಇನ್ನೂ ಎಷ್ಟೋ ಕಷ್ಟನಷ್ಟಗಳನ್ನು ಅಲ್ಲಿಯ ಜನರು ಅನುಭವಿಸುತ್ತಿದ್ದಾರೆ. ಕೊನೆಯ ತಾಲಿಬಾನ್‌ವರೆಗೂ ಹೋರಾಡುವು ದಾಗಿಯೂ, ಬಿನ್ ಲಾಡೆನನ್ನು ಒಪ್ಪಿಸುವುದಿಲ್ಲವಾಗಿಯೂ ಅಲ್ಲಿಯ ತಾಲಿಬಾನ್ ಸರ್ಕಾರ ಹೇಳಿದೆ. ಭಯೋತ್ಪಾದನೆಯ ವಿರುದ್ಧದ ಈ ಯುದ್ಧ ಅನೇಕ ವರ್ಷಗಳವರೆಗೆ ನಡೆಯುವುದಾಗಿ ಅಮೇರಿಕ ಘೋಷಿಸಿದೆ.

ಈ ಯುದ್ಧ ಮುಂದುವರೆದಂತೆ ಪ್ರಪಂಚದ ರಾಜಕಾರಣ ಬಹಳಷ್ಟು ಬದಲಾವಣೆಗೊಳ್ಳಲಿದೆ ಮತ್ತು ಆರ್ಥಿಕವಾಗಿಯೂ ಅನೇಕ ಸ್ಥಿತ್ಯಂತರಗೊಳ್ಳ ಲಿದೆ. ಈ ಯುದ್ಧದ ಒಂದು ಮುಖ್ಯ ಪರಿಣಾಮ ಭಯೋತ್ಪಾದನೆಯ ವ್ಯಾಖ್ಯೆ, ಅದರ ವ್ಯಾಪ್ತಿ ಮತ್ತು ಅದರ ನಿಯಂತ್ರಣ ಈ ಕುರಿತಾದ ಒಂದು ಸರ್ವಸಮ್ಮತಿ ಅಭಿಪ್ರಾಯ ರೂಪಗೊಳ್ಳುವ ಸಾಧ್ಯತೆ. ಈಗ ಭಯೋತ್ಪಾದಕರನ್ನು ಅಟ್ಟಿಸಿಕೊಂಡು ಇನ್ನೊಂದು ದೇಶದೊಳಕ್ಕೂ ನುಗ್ಗು ವುದು ಅಂತರ್‌ರಾಷ್ಟ್ರೀಯ ಕಾನೂನಿಗೆ ವಿರೋಧವಾಗಿರುವುದಿಲ್ಲವೆಂಬ ಅಭಿ ಪ್ರಾಯವೂ ಕೇಳ ಬರುತ್ತಿದೆ. ಈ ರೀತಿ ಏನಾದರೂ ಸಂಭವಿಸಿದಲ್ಲಿ ಭಯೋ ತ್ಪಾದನೆಯ ನಿರ್ಮೂಲನದ ಹೆಸರಿನಲ್ಲಿ ಭಾರತ-ಪಾಕ್; ಇಸ್ರೈಲ್-ಟುನಿಸಿಯಾ, ಇರಾಕ್-ಕುವೈಟ್, ಚೀನಾ-ತೈವಾನ್, ಆಫ್ರಿಕಾ ಖಂಡದಲ್ಲಿಯ ಕೆಲ ದೇಶಗಳ ಮಧ್ಯ ಯುದ್ಧಗಳು ಸಂಭವಿಸಿದರೆ ಆಶ್ಚರ್ಯ ಪಡಬೇಕಾಗಿಲ್ಲ. ಇಲ್ಲಿ ಗಮನಿಸ ಬೇಕಾದ ಇನ್ನೊಂದು ಅಂಶವೇನೆಂದರೆ ಈಗ ಅಮೇರಿಕಾ ಹೂಡಿರುವ ಯುದ್ಧ ಯಾವುದೇ ಒಂದು ದೇಶದ ವಿರುದ್ಧವಾಗಲೀ ಅಥವಾ ರಾಜ್ಯ ಬೆಂಬಲಿತ ವ್ಯಕ್ತಿ ಅಥವಾ ಸಂಘಟನೆಯ ವಿರುದ್ಧವಾಗಲೀ ಇಲ್ಲದೇ ಇರುವುದರಿಂದ ಈ ಯುದ್ಧವು ಅಂತರರಾಷ್ಟ್ರೀಯ ಕಾನೂನಿನ ಅರ್ಥದ ವ್ಯಾಪ್ತಿಯೊಳಗೆ ಬರುವುದಿಲ್ಲ ವಷ್ಟೇ ಅಲ್ಲ, ಈ ಯುದ್ಧಕ್ಕೆ ಸಂಯುಕ್ತ ರಾಷ್ಟ್ರ ಸಂಘದ ಒಪ್ಪಿಗೆ ದೊರೆತಿರುವು ದಿಲ್ಲ. ಈ ರೀತಿಯಾಗಿ ಈಗ ನಡೆಯುತ್ತಿರುವ ಯುದ್ಧ ಒಂದು ಅರ್ಥದಲ್ಲಿ ಅಂತರ್‌ರಾಷ್ಟ್ರೀಯ ಅರಾಜಕತೆಯೆಂದು ಕರೆಯಬಹುದು. ಅಮೇರಿಕಾ ಪಾಕಿ

ಸ್ತಾನಕ್ಕೆ ಬಹುಗಾತ್ರದ ಆರ್ಥಿಕ ಸಹಾಯವನ್ನು ಕೊಟ್ಟು ಅದರ ಭೂಮಿಯನ್ನು ಯುದ್ಧಕ್ಕಾಗಿ ಉಪಯೋಗಿಸಲು ಅನುಮತಿ ಪಡೆದುಕೊಂಡಿದೆ. ಪಾಕಿಸ್ತಾನ ವಾದರೂ ಸಹ ತನ್ನ ಆರ್ಥಿಕ ದುಃಸ್ಥಿತಿಯಿಂದ ಪಾರಾಗಲು ಈ ಹಣವನ್ನು ತನ್ನೆಲ್ಲ ಮೊದಲಿನ ನೀತಿ-ಸಿದ್ಧಾಂತಗಳನ್ನು ಗಾಳಿಗೆ ತೂರಿ ಅಮೇರಿಕೆಯ ತಾಳಕ್ಕೆ ತಕ್ಕ ಹಾಗೆ ಕುಣಿಯುತ್ತಿದೆ. ಈ ರೀತಿ ಒಂದು ದೇಶವು ಇನ್ನೊಂದು ದೇಶಕ್ಕೆ ಯುದ್ಧದ ಸಮಯದಲ್ಲಿ ಹಣ ನೀಡುವುದರ ಮೂಲಕ ತನ್ನ ಸ್ವಾರ್ಥಕ್ಕಾಗಿ ಉಪಯೋಗಿಸಿಕೊಂಡ ಉದಾಹರಣೆಗಳು ಇತಿಹಾಸದಲ್ಲಿ ವಿರಳವಾಗಿವೆ.

ಆಫಘಾನ ಯುದ್ಧದಿಂದ ಆಗಬಹುದಾದ ಪರಿಣಾಮಗಳು ಈ ರೀತಿ ಇವೆ:-

೧, ಅಮೇರಿಕಾ ಈ ಯುದ್ಧವನ್ನು "ಕ್ರುಸೇಡ್" ಎಂದು ಕರೆದರೆ, ಆಫಘಾನಿಸ್ತಾನ ಇದನ್ನು "ಜಿಹಾದ್" ಎಂದು ಕರೆದಿದೆ. ಈ ಯುದ್ಧ ಮುಂದುವರೆದಲ್ಲಿ ಎರಡೂ ಧರ್ಮಗಳ ಮಧ್ಯದ ಯುದ್ಧವಾಗಿ ರೂಪಾಂತರಗೊಳ್ಳುವ ಸಾಧ್ಯತೆ ಇದೆ. ಇದೊಂದು ಭಯಂಕಾರವಾದ ಪರಿಣಾಮ; ಈಗ ಸಧ್ಯಕ್ಕಂತೂ ಅಮೇರಿಕಾ ಈ ಯುದ್ಧವು ಭಯೋತ್ಪಾದಕತೆಯ ವಿರುದ್ಧವೇ ಹೊರತು ಇಸ್ಲಾಂ ವಿರುದ್ಧವಲ್ಲವೆಂದು ಹೇಳಿದೆ; ಆದರೆ ಪಾಕಿಸ್ತಾನದಲ್ಲಿಯ 'ಜಿಹಾದಿ' ಮುಸ್ಲೀಂರು ಅಮೇರಿಕೆಯ ಮೇಲಿನ ಸೇಡನ್ನು ತೀರಿಸಿಕೊಳ್ಳಲು ಪಾಕಿಸ್ತಾನದಲ್ಲಿ ಬಹಲ್ವಾಎಂಬಲ್ಲಿ ೧೩ ಜನ ಕ್ರಿಶ್ಚಿಯನ್ನರನ್ನು ಕೊಲೆಮಾಡಿದ್ದಾರೆ.

೨. ಬಿನ್ ಲಾಡೆನ್ ಬಳಿ ನೂಕ್ಲಿಯರ್ ಶಸ್ತ್ರಾಸ್ತ್ರಗಳು ಇರಬಹುದೆಂಬ ಶಂಕೆ ಇದೆ; ಅದನ್ನು ಅವನು ತನ್ನ ಅಂತಿಮ ಅಸ್ತ್ರವಾಗಿ ಉಪಯೋಗಿಸಿದರೆ ಅದರ ಭೀಕರ ಪರಿಣಾಮಗಳನ್ನು ಊಹಿಸಲೂ ಸಾಧ್ಯವಿಲ್ಲ;

೩, ಈಗಾಗಲೇ ಆಂತರಾಕ್ಸ್ ಎಂಬ ರಾಸಾಯನಿಕ ಅಸ್ತ್ರ ಅಲ್ಲಲ್ಲಿ, ಮುಖ್ಯವಾಗಿ ಅಮೇರಿಕೆಯಲ್ಲಿ, ಹಬ್ಬಿ ಹಲವು ಜನರ ಸಾವಿಗೆ ಕಾರಣವಾಗಿದೆ; ಇನ್ನೂ ಇಂತಹ ಹಲವು ರಾಸಾಯನಿಕ ಅನಿಲ ಅಸ್ತ್ರಗಳು ಬಳಕೆಗೆ ಬರುವ ಸಾಧ್ಯತೆ ಇದೆ. ಇದರಿಂದ ಆಗುವ ಪ್ರಾಣ ಹಾನಿ ಅಪಾರ;

೪. ಭಯೋತ್ಪಾದಕತೆಗೆ ಯಾವುದೇ ಗಡಿ ಇಲ್ಲದೇ ಇರುವುದರಿಂದ ಮತ್ತು ಅಂಥ ವ್ಯಾಪಕವಾದ ಒಂದು ಶತ್ರುವನ್ನು ಇಡೀ ಪ್ರಪಂಚ ಎದುರಿಸಬೇಕಾಗಿ ಬಂದಿರುವುದರಿಂದ ಮೂಲಭೂತವಾದಿಗಳನ್ನು ಎದುರಿಸುವ ತಂತ್ರದ ವಿಚಾರದಲ್ಲಿ ಬದಲಾವಣೆಯಾಗಬೇಕಾದುದು ಅನಿವಾರ್ಯವಾಗುತ್ತದೆ.

೫. ಭಯೋತ್ಪಾದಕತೆಗೆ ಕಾರಣಗಳಾದವು ಎಂಬುದನ್ನು ಗುರುತಿಸಿ ಅವುಗಳ ನಿವಾರಣೆಗೆ ಕೇವಲ ರಾಜಕೀಯ ಪ್ರಯತ್ನವೊಂದೇ ಸಾಲದು; ಆರ್ಥಿಕ, ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಪ್ರಯತ್ನಗಳೂ ನಡೆಯಬೇಕೆಂಬ ಅನಿಸಿಕೆ ತೀವ್ರಗೊಳ್ಳುತ್ತಲಿರುವುದು ಒಂದು ಒಳ್ಳೆಯ ಬೆಳವಣಿಗೆ ಯಾಗಿದೆ;

೬. ಶಸ್ತ್ರಾಸ್ತ್ರಗಳ ಪೈಪೋಟಿಗೆ ಪ್ರೋತ್ಸಾಹ ಕೊಡುವಂಥ ಪರಿಸ್ಥಿತಿ ಈ ಯುದ್ಧದಿಂದಾಗುವ ಸಾಧ್ಯತೆಯಿದೆ;

೭. ಪ್ರಪಂಚದ ವಿವಿಧ ದೇಶಗಳ ಮಧ್ಯ ಇರುವ ನೂರಾರು ಗಡಿ ಸಮಸ್ಯೆಗಳ ಪರಿಹಾರಕ್ಕೆ ಭಯೋತ್ಪಾದಕತೆಯನ್ನು ಒಂದು ಮಹತ್ವದ ಸಾಧನವನ್ನಾಗಿ ಮಾಡಿಕೊಳ್ಳುವ ಸರ್ಕಾರಗಳು ಇನ್ನು ಮುಂದೆ ಆ ರೀತಿ ಮಾಡುವ ಮುನ್ನ ಬಹಳಷ್ಟು ಆಲೋಚಿಸಬೇಕಾಗುತ್ತದೆ;

೮. ಪ್ರಪಂಚದಲ್ಲಿ ಅಮೇರಿಕಾ ಎಲ್ಲ ಅರ್ಥದಲ್ಲೂ ಬಲಾಢ್ಯ ರಾಷ್ಟ್ರವಾಗಿದೆ. ಅದು ಈಗ ತನ್ನ ಸೆಪ್ಟೆಂಬರ್ ೧೧ ರ ಅನುಭವದ ಆಧಾರದ ಮೇಲೆ ಭಯೋತ್ಪಾದನೆಯ ವಿರುದ್ಧ ಸಾರಿರುವ ಯುದ್ಧದಲ್ಲಿ ಎಲ್ಲ ರಾಷ್ಟ್ರಗಳ ಬೆಂಬಲವನ್ನೂ, ನೆರವನ್ನೂ ಕೋರಿದೆ. ಈ ಯುದ್ಧಾ ನಂತರ ಅದು ಸಂಯುಕ್ತ ರಾಷ್ಟ್ರ ಸಂಘದ ಮೂಲಕ ಪ್ರಪಂಚದ ಯಾವುದೇ ಸ್ಥಳದಲ್ಲಿ ಭಯೋತ್ಪಾದನೆ ನಡೆದರೆ ಅದನ್ನು ಈಗಿನ ರೀತಿಯಂತೆ ತನ್ನ ಸ್ವಾರ್ಥಕ್ಕಾಗಿ ಬಳಸಿಕೊಳ್ಳದೆ - ಅದನ್ನು ವಿಶ್ವಶಾಂತಿ ಗಾಗಿ ದಮನಮಾಡಲು ಸದಾ ಸಿದ್ಧವಾಗಿರಬೇಕಾಗುತ್ತದೆ.

೯. ಕಾಶ್ಮೀರ ಸಮಸ್ಯೆಯ ಪರಿಹಾರ ಇನ್ನೂ ಚಿಕ್ಕಟ್ಟಾಗುವ ಸಂಭವ ವಿದೆ; ಏಕೆಂದರೆ ಪಾಕಿಸ್ತಾನದಲ್ಲಿಯ ಬಹುಸಂಖ್ಯಾತ್ಯ ಮುಸ್ಲಿಂನರು ತಾಲಿಬಾನ್ ಪರವಾಗಿದ್ದಾರೆ ಮತ್ತು ಈಗಿನ ಮುಷರಫ್ ಸರಕಾರವನ್ನು ಉರುಳಿಸುವಂತೆ ಬಲವಾದ ಹೋರಾಟ ನಡೆಸಿದ್ದಾರೆ; ಒಂದು ವೇಳೆ ಇವರ ಕೈಮೇಲಾದರೆ ಆಗ ಪಾಕಿಸ್ತಾನದಲ್ಲಿ ತಾಲಿ ಬಾನ್ ವಿಚಾರವಾದಿಗಳ ಸರಕಾರವೇ ರಚನೆಗೊಳ್ಳುವುದು; ತಾಲಿಬಾನ್ ವಾದಿಗಳು ಕಾಶ್ಮೀರಕ್ಕಾಗಿ ಹೋರಾಟ ನಡೆಸದೇ ಇರುವುದಿಲ್ಲ. ಎಲ್ಲಿಯವರೆಗೆ ಪಾಕಿಸ್ತಾನದಲ್ಲಿ ಪುರೋಗಾಮಿ ವಿಚಾರದ ಸರ್ಕಾರ ಅಸ್ತಿತ್ವಕ್ಕೆ ಬರುವುದಿಲ್ಲವೋ ಅಲ್ಲಿಯವರೆಗೆ ಇದೇ ಸ್ಥಿತಿ ಮುಂದು ವರಿಯುವುದು.

ಆಫಘಾನ ಯುದ್ಧವು, ಪ್ರಪಂಚದ ಕೆಲ ರಾಷ್ಟ್ರಗಳ ಕೈಯಲ್ಲಿ ಅತ್ಯಂತ

ರಕ್ಷಾ ಪುಟಕ್ಕೆ

ಹೊಸ ಸಮಾಜ ನಿರ್ಮಾಣದ ಪ್ರತಿಪಾದಕ ಜಯಪ್ರಕಾಶ ನಾರಾಯಣ್

-ಸುರೇಂದ್ರ ಕೌಲಗಿ

ಜಯಪ್ರಕಾಶ ನಾರಾಯಣ ಓರ್ವ ಅಪರೂಪದ ರಾಜಕಾರಣಿ. ಅವರು ಸ್ವತಃ ರಾಜಕಾರಣಿಯಾಗಿದ್ದರೂ ಸಹ ಬೇರೆ ರಾಜಕಾರಣಿಗಳಂತೆ ಅಧಿಕಾರವನ್ನು ಬಯಸುವ ಅಥವಾ ಅದಕ್ಕಾಗಿ ಹೋರಾಟ ಮಾಡುವಂಥ ರಾಜಕಾರಣಿ ಜಯಪ್ರಕಾಶ ನಾರಾಯಣ್ ಆಗಿರಲಿಲ್ಲ. ೧೯೩೪ ರಲ್ಲಿ ಜಯಪ್ರಕಾಶ ಮತ್ತು ಕೆಲವು ನಾಯಕರು ಸೇರಿ "ಕಾಂಗ್ರೆಸ್ ಸಮಾಜವಾದಿ ಪಕ್ಷ"ವನ್ನು ಸ್ಥಾಪಿಸಿದರು; ಆದರೆ ಅವರು ಆ ಪಕ್ಷದ ಅಧ್ಯಕ್ಷತೆಯನ್ನು ಅಂಗೀಕರಿಸಲಿಲ್ಲ; ಬದಲಿಗೆ ಆ ಪಕ್ಷದ ಪ್ರಧಾನ ಕಾರ್ಯದರ್ಶಿಯಾಗಿ ಕೆಲಸ ಮಾಡಿದರು. ಮುಂದೆ ಅವರು ಅನೇಕ ಕಾರ್ಮಿಕ ಸಂಘಟನೆಗಳ ಕಾರ್ಯದರ್ಶಿಯಾಗಿ ಕೆಲಸ ಮಾಡಿದರೆ ಹೊರತು ಯಾವುದೇ ಸಂಘಟನೆಯ ಅಧ್ಯಕ್ಷರಾಗಿರಲಿಲ್ಲ. ಅದೇ ರೀತಿ ೧೯೪೭ ರಲ್ಲಿ ಸ್ವಾತಂತ್ರ್ಯ ಬಂದಾದ ನಂತರ ಸರ್ಕಾರವನ್ನು ರಚಿಸುವಾಗ ಜವಾಹರಲಾಲ್ ನೆಹರೂ ಅವರು ಜಯಪ್ರಕಾರನ್ನು ಉಪ ಪ್ರಧಾನಮಂತ್ರಿಯಾಗಲು ಆಹ್ವಾನಿಸಿದರು. ಆದರೆ ಜಯಪ್ರಕಾಶ ಆ ಅಧಿಕಾರವನ್ನು ಸ್ವೀಕರಿಸದೆ ಸರಕಾರದ ಹೊರಗೇ ಉಳಿದು ಒಂದು ವಿರೋಧಪಕ್ಷದಂತೆ ಕೆಲಸ ಮಾಡಿದರು. ೧೯೫೪ ರಲ್ಲಿ ಜಯಪ್ರಕಾಶರು ಸಮಾಜವಾದಿ ಪಕ್ಷವನ್ನು ತ್ಯಜಿಸಿ ಸರ್ವೋದಯ ಆಂದೋಲನಕ್ಕ ಧುಮುಕಿದ ನಂತರವೂ ಸಹ ಅಲ್ಲಿ ಯಾವುದೇ ಸಂಘಟನೆಯ ಅಧ್ಯಕ್ಷರಾಗಿ ಅಧಿಕಾರ ನಡೆಸಲಿಲ್ಲಿ; ಜನರು ಮತ್ತು ಪತ್ರಿಕೆಗಳವರು ಅವರನ್ನು ಸರ್ವೋದಯ ನಾಯಕರೆಂದು ಕರೆದರೆ ಹೊರತು ಅವರು ಸ್ವತಃ ತಮ್ಮನ್ನು ಸರ್ವೋದಯ "ಕಾರ್ಯಕರ್ತ"ನೆಂದೇ ಕರೆದುಕೊಳ್ಳುತ್ತಿದ್ದರು. ೧೯೭೫ ರ ತುರ್ತು ಪರಿಸ್ಥಿತಿಯ ವಿರುದ್ಧ ಹೋರಾಟವಾದ ಮೇಲೆ ಚುನಾವಣೆ ನಡೆದು ಜನತಾ ಪಕ್ಷದ ರಚನೆಗೆ ಜಯಪ್ರಕಾಶ ನಾರಾಯಣರು ಕಾರಣರಾಗಿದ್ದರೂ ಸಹ ಅವರು ಆ ಪಕ್ಷದ ಅಧ್ಯಕ್ಷರಾಗಲೀ, ಪ್ರಧಾನಮಂತ್ರಿಯಾಗಲೀ ಆಗಲು ಸಮ್ಮತಿಸಲಿಲ್ಲ. ಆಗಲೂ ಸಹ ಅವರು ಅಧಿಕಾರದ ಕಕ್ಷೆಯ ಹೊರಗೆ ಇದ್ದುಕೊಂಡೇ ರಾಜಕೀಯ ಕಾರ್ಯಕ್ರಮಗಳಲ್ಲಿ ಭಾಗವಹಿಸಿದರು. ಅವರು ೧೯೭೯ ಅಕ್ಟೋಬರ್ ೧೦ ರಂದು ತೀರಿಕೊಂಡಾಗ ಅವರ ಸ್ಥಾನ "ಲೋಕನಾಯಕ" ಎಂದಾಗಿತ್ತೇ ಹೊರತು ಯಾವುದೇ ಮಂತ್ರಿಯೆಂದಾಗಿರಲಿಲ್ಲ. ಈ ಎಲ್ಲ ಉದಾಹರಣೆಗಳಿಂದ ನಮಗೆ ಜಯಪ್ರಕಾಶ ನಾರಾಯಣರ ರಾಜಕೀಯ ಚಿಂತನೆಯೇ

ವಿಶಿಷ್ಟವಾಗಿದ್ದಿರಬಹುದೆಂದು ಅನಿಸುತ್ತದೆ. ೧೯೫೪ ರಲ್ಲಿ ಜಯಪ್ರಕಾಶರು ಸಮಾಜವಾದಿ ಪಕ್ಷವನ್ನೂ ಅದರ ಮೂಲಕ ಪಕ್ಷ ರಾಜಕಾರಣವನ್ನೂ ತ್ಯಜಿಸಿದಾಗ ಎಲ್ಲ ರಾಜಕಾರಣಿಗಳು ಮುಖ್ಯವಾಗಿ ವಿರೋಧ ಪಕ್ಷದ ಎಲ್ಲ ರಾಜಕಾರಣಿಗಳು ಜಯಪ್ರಕಾಶರ ಈ ತೀರ್ಮಾನ ಭಾರತದ ರಾಜಕಾರಣಕ್ಕೇ ಒಂದು ಬಲವಾದ ಪ್ರಹಾರ ಮತ್ತು ಅದೊಂದು ಮಹಾ ರಾಜಕೀಯ ತಪ್ಪು ಎಂದೆಲ್ಲ ಬಣ್ಣಿಸಿದರು. ಆದರೆ ಜಯಪ್ರಕಾಶರು ೧೯೫೨ ರಲ್ಲಿ ಪುಣೆಯಲ್ಲಿ ಮೂರು ವಾರಗಳ ಆತ್ಮಶುದ್ಧಿಯ ಉಪವಾಸವನ್ನು ಮಾಡಿ ಶುದ್ಧ ಮನಸ್ಸಿನಿಂದ, ವಿಕಾರರಹಿತ ಭಾವನೆಯಿಂದ, ತಟಸ್ಥ ಮನೋಭಾವದಿಂದ ಇದು ವರೆಗಿನ ತಮ್ಮ ಸಾಮ್ಯವಾದದ ವಿಚಾರ ಇತ್ಯಾದಿಗಳು ತಾವು ಜೀವನದುದ್ದಕ್ಕೂ ಇಟ್ಟುಕೊಂಡು ಬಂದಿರುವ ಸ್ವಾತಂತ್ರ್ಯ, ಸಮತೆ, ಸೌಹಾರ್ದ ಮತ್ತು ಶಾಂತಿಯಂಥ ಮೌಲ್ಯಗಳ ಸಮಾಜೀಕರಣಕ್ಕೆ ಸಾಧನವಾಗಬಲ್ಲವೇ ಎಂದು ಕುರಿತಾಗಿ ತಮ್ಮ ಇದು ವರೆಗಿನ ಸಕ್ರಿಯ ರಾಜಕಾರಣದ ಅನುಭವದ ಬೆಳಕಿನಲ್ಲಿ ಆತ್ಮಪರೀಕ್ಷೆ ಮಾಡಿಕೊಂಡರು. ಗೌತಮನು ಅರಮನೆ ಬಿಟ್ಟು ನಾಡು-ಕಾಡು ಎಲ್ಲವನ್ನು ನೋಡಿ ಆಯಾಸಗೊಂಡು ಬೋಧೀವೃಕ್ಷದ ಕೆಳಗೆ ಚಿಂತನೆಯಲ್ಲಿದ್ದಾಗ ಅವನಿಗೆ ಸರಿಯೆನಿಸಿದ ಜ್ಞಾನೋದಯವಾಯಿತು; ಬುದ್ಧನಾದ; ಪ್ರಪಂಚಕ್ಕೆ ಪ್ರೇಮ-ಅಹಿಂಸೆಯ ದಾರಿ ತೋರಿಸಿದ. ಅದೇ ರೀತಿ ಜಯಪ್ರಕಾಶರಿಗೆ ಈ ದೀರ್ಘ ಉಪವಾಸದಿಂದ ಪಕ್ಷ ರಾಜಕಾರಣ, ಅಧಿಕಾರ ರಾಜಕಾರಣ, ಸ್ವಾರ್ಥ ಪ್ರೇರಿತ ರಾಜಕಾರಣ, ಭ್ರಷ್ಟಗೊಂಡಿರುವ ಸಮಾಜ ಇವುಗಳ ಬಗ್ಗೆ ತಿರಸ್ಕಾರ ಹುಟ್ಟಿತು. ಆಗ ಅವರು ಹೇಳಿದ ಮಾತುಗಳಿವು, "ನಾನೇಕೆ ಸಾಂಪ್ರದಾಯಿಕ ರಾಜಕಾರಣವನ್ನು ತ್ಯಜಿಸಿ ಬಂದೆನೆಂದು ಈಗ ಗೊತ್ತಾದೀತು. ನಿಷೇಧಾತ್ಮಕ ನಿರ್ಣಯವಲ್ಲ ಅದು. ರಾಜಕೀಯ ಕ್ಷೇತ್ರದ ವಿರೂಪ ನನ್ನನ್ನು ಹಿಮ್ಮೆಟ್ಟಿಸಲಿಲ್ಲ. ಸರ್ವೋದಯದ ಹೊಸ ರಾಜಕಾರಣ ನನ್ನನ್ನು ಪ್ರಬಲವಾಗಿ ಆಕರ್ಷಿಸಿತು ... ಲೋಕನೀತಿ ಬೆಳೆದಂತೆಲ್ಲ ಈ ಹಳೆಯ ರಾಜನೀತಿ ಕರಗುತ್ತದೆ. ಇದೇ ನಿಜವಾದ ಅರ್ಥದಲ್ಲಿ ರಾಜ್ಯ ವ್ಯವಸ್ಥೆಯ ಅಂತಿಮ ವಿಸರ್ಜನೆಯ ಮಾರ್ಗ. ರಾಜಕೀಯ ಆರ್ಥಿಕ ಹೋರಾಟಕ್ಕೆ ಇವೆಲ್ಲ ಅಸಂಗತ ಎಂದು ಕೆಲವರಿಗನಿಸಬಹುದು. ನಾನಿದನ್ನು ವಿನಯದಿಂದ ನಿರಾಕರಿಸುತ್ತೇನೆ ವೈಯುಕ್ತಿಕವಾಗಲಿ, ಸಾರ್ವಜನಿಕವಾಗಲಿ, ರಾಜಕೀಯವಾಗಲಿ, ಆರ್ಥಿಕವಾಗಲಿ ಈ ಎಲ್ಲ ಕರ್ಮಕ್ಕೂ ಒಂದು ಸಮಗ್ರ ದೃಷ್ಟಿ ಬೇಕು. ಬಾಳಿನ ಬಗೆಗಿನ ತತ್ವನಿಷ್ಠೆಯೇ ಈ ಸಮಗ್ರತೆಯ ಕೇಂದ್ರ, ಬಿಂದುವಾಗುತ್ತದೆ."

ಇಂದಿರಾ ಗಾಂಧೀಯವರು ೧೯೭೫ ರಲ್ಲಿ ಜಯಪ್ರಕಾಶರನ್ನು ಬಂಧಿಸಿ ಕಾರಾ

ಗೃಹದಲ್ಲಿಟ್ಟಾಗ ಅವರು ಬರೆದ ಕವನದ ಸಾಲುಗಳು ಅವರ ಉದಾತ್ತಭಾವನೆಯು ಸಂಕೇತವಾಗಿದೆ.

ತುಂಬಿಹುದು ಜೀವನ
ವಿಫಲತೆಗಳಿಂದ.
ಸಫಲತೆ ಬಂದರೆ ಸನಿಹಕೆ
ತಳ್ಳಿದೆನು ದೂರ ಅವುಗಳನು
ನನ್ನ ದಾರಿಯಿಂದ.
ಅದು ಮೂರ್ಖತೆಯೊ ?
ಅಲ್ಲ
ಸಫಲತೆ ವಿಫಲತೆಗಳ
ಪರಿಭಾಷೆಯೇ ಇದೆ ಬೇರೆ.
ಇತಿಹಾಸವನು ಕೇಳಿ
ವರ್ಷಗಳ ಹಿಂದೆ ಸಾಧ್ಯವಿದ್ದಿಲ್ಲವೆ
ಪ್ರಧಾನಮಂತ್ರಿಯಾಗಲು ?
ಬೇರೆಯೇ ಪಥ ಮಾನ್ಯವಾಗಿತ್ತು ನನಗೆ.
ತ್ಯಾಗದ ಪಥ, ಸೇವಾ ಪಥ, ನಿರ್ಮಾಣಪಥ,
ಸಂಘರ್ಷ ಪಥ, ಸಂಪೂರ್ಣ ಕ್ರಾಂತಿ ಪಥ.
ವಿಫಲತೆಯೆಂದು ಸಾರಿತು ವಿಶ್ವ
ಅವು ಇದ್ದವು ಶೋಧನೆಯ ಹಂತಗಳು
ಹಂತಗಳಿವೆ ಅಗಣಿತ
ದಾರಿಯೂ ಇದೆ ಬಹುದೂರ
ನಿಲ್ಲರಾರೆ ಎಲ್ಲಿಯೂ
ದಾರಿ ಎಷ್ಟೇ ಇರಲಿ ದುರ್ಗಮ.
ಆಸೆ ಸ್ವಂತದಾವುದಿಲ್ಲ ನನಗೆ
ಎಲ್ಲ ಈಶ ಅರ್ಪಿತ.
ವಿಫಲತೆ ತಂದಿದೆ ಸಮಾಧಾನ
ಧನ್ಯವಾಗಲಿದೆ ವಿಫಲಗೊಂಡ ಜೀವನ
ನೂರು ನೂರು ಬಾರಿ.
ಸಮಾನಧರ್ಮದ ಪ್ರಿಯ ತರುಣರಿಗೆ
ಸುಗಮವಾಗಲಿ ಕಷ್ಟದ ಈ ದಾರಿ.

ರೈತರ ಆತ್ಮಹತ್ಯೆಗೆ ಇಡೀ ಸಮಾಜವೇ ಹೊಣೆ

–ಪದ್ಮರಾಜ ದಂಡಾವತಿ

ಇದು ಖಂಡಿತ ಒಳ್ಳೆಯ ಸುದ್ದಿ ಅಲ್ಲ. ಹೊಲದಲ್ಲಿ ಉತ್ತಿ ಬಿತ್ತಿ ನಾಡಿಗೇ ಅನ್ನ ನೀಡುತ್ತಿರುವ ರೈತ ಇಂದು ನೇಣಿಗೆ ಕೊರಳು ನೀಡುತ್ತಿದ್ದಾನೆ. 'ಆಲೂಗೆಡ್ಡೆ ಬೆಳೆದ ರೈತನ ಆತ್ಮಹತ್ಯೆ', 'ಸಾಲದ ಹೊರೆ - ನೇಣಿಗೆ ಶರಣಾದ ರೈತ' ಎಂಬ ಸುದ್ದಿಗಳು ಇಂದಿನ ಸುದ್ದಿಮಾಧ್ಯಮಗಳಲ್ಲಿ ಅಪಘಾತದ ಸುದ್ದಿಗಳ ಹಾಗೆಯೇ ಸಾಮಾನ್ಯ ಎಂಬಂತಾಗಿಬಿಟ್ಟಿವೆ.

ವಿಶೇಷ ಎಂದರೆ ಉತ್ತರದ ಬೀದರ್ ತುದಿಯಿಂದ ದಕ್ಷಿಣದ ಕೋಲಾರದವರೆಗೆ, ಪಶ್ಚಿಮದ ಬೆಳಗಾವಿಯಿಂದ ಪೂರ್ವದ ರಾಯಚೂರು ವರೆಗೆ ಯಾವುದೇ ಜಿಲ್ಲೆಯ ಯಾವುದೇ ತಾಲ್ಲೂಕಿನ ರೈತನೂ ಈ ಸಮೂಹ ಸನ್ನಿಯಿಂದ ಹೊರತಾಗಿಲ್ಲ. ಜೋಳ, ರಾಗಿ, ಭತ್ತದಂಥ ಆಹಾರ ಧಾನ್ಯ ಬಿತ್ತುವ ರೈತ ಹಾಗೆಯೇ ತೆಂಗು, ಅಡಿಕೆ, ಕಬ್ಬಿನಂಥ ವಾಣಿಜ್ಯ ಬೆಳೆ ತೆಗೆಯುವ ರೈತನೂ ಉರುಳಿಗೆ ಕೊರಳು ಕೊಡುತ್ತಿದ್ದಾನೆ.

ರಾಜ್ಯದಲ್ಲಿ ೧೯೯೭ ರಲ್ಲಿ ಬೀದರ್ ಜಿಲ್ಲೆಯಲ್ಲಿ ಈ ದುರದೃಷ್ಟಕರ ಬೆಳವಣಿಗೆ ಪ್ರಾರಂಭವಾಯಿತು. ಕಳಪೆ ಬೀಜ, ಗುಣಮಟ್ಟವಿಲ್ಲದ ಕೀಟನಾಶಕ ಮತ್ತು ಕೈಕೊಟ್ಟ ತೊಗರಿ ಬೆಳೆಯಿಂದಾಗಿ ತಮ್ಮ ಮೇಲಿನ ಸಾಲದ ಹೊರೆ ಏರುತ್ತ ಹೊರಟು ಕೊನೆಗೆ ಅದನ್ನು ತೀರಿಸಲು ಸಾಧ್ಯವೇ ಇಲ್ಲ ಎಂಬ ಹಂತ ಮುಟ್ಟಿದಾಗ ರೈತರು ಮಾನ ಉಳಿಸಿಕೊಳ್ಳಲು ಮರಣದ ಮೊರೆಹೊಕ್ಕಿದ್ದರು.

ಈ ವರ್ಷದ ಪ್ರಾರಂಭದಲ್ಲಿಯೇ ಧಾರವಾಡ ಜಿಲ್ಲೆಯ ನವಲೂರಿನಿಂದ ಪ್ರಾರಂಭವಾಗಿರುವ ರೈತರ ಮರಣಪರ್ವ ಈ ದಿನದ ವರೆಗೆ ಮುಂದುವರಿದಿದೆ. ರೈತರ ಸಂಕಷ್ಟಗಳು ಯಾವುವೂ ಪರಿಹಾರ ಕಂಡಿಲ್ಲವಾದ್ದರಿಂದ ಅವರ ಸಾವಿನ ಸರಪಳಿಯೂ ಕಡಿದುಬೀಳುವ ಸಾಧ್ಯತೆ ಕಾಣುತ್ತಿಲ್ಲ. ಕಳೆದ ಒಂದೂವರೆ ವರ್ಷದಲ್ಲಿ ಸತ್ತಿರುವ ರೈತರ ಸಂಖ್ಯೆ ೩೫ನ್ನು ದಾಟಿದ್ದರೆ ಇದುವರೆಗೆ ೧೯೯೭ರಿಂದ ರಾಜ್ಯದಲ್ಲಿ ಸತ್ತಿರುವ ರೈತರ ಸಂಖ್ಯೆ ೫೯ ಎಂದು ಸರ್ಕಾರ ಅಧಿಕೃತವಾಗಿ ಒಪ್ಪಿಕೊಂಡಿದೆ.

ರಥಮುಸಲದ ಹಾಗೆ ರೈತರನ್ನು ಸಮಸ್ಯೆಗಳು ಮುತ್ತಿಕಾಡುತ್ತಿವೆ. 'ಭಾರತದಲ್ಲಿ ಹೇಗಿದ್ದರೂ ಕೃಷಿ ನಿಸರ್ಗದ ಜತೆಗಿನ ಜೂಜು' ಎಂಬ ಹಳೆಯ ನಂಬಿಕೆ ಜತೆಗೆ ಹೊಸ ತೊಂದರೆಗಳೂ ಸೇರಿಕೊಂಡು ಕೃಷಿಕನ ಸಮಸ್ಯೆಗಳು ಮುಪ್ಪುರಿಗೊಂಡಿವೆ. ಹದವಾದ ಮಳೆ ಬಿದ್ದು, ಒಳ್ಳೆಯ

ಬೀಜ-ಗೊಬ್ಬರ ಸಿಕ್ಕರೆ ರೈತ ತನ್ನ ಮನೆಯ ಹಗೆವುಗಳನ್ನು ಮಾತ್ರವಲ್ಲದೆ ನಾಡಿನ ಕಣಜವನ್ನೇ ತುಂಬಿಬಿಡುತ್ತಾನೆ. ಆದರೆ ಇದು ಕೇವಲ ಆಶಯ ಮಾತ್ರವಾಗಿ ಉಳಿದಿದೆ. ಸಣ್ಣ ಹಿಡುವಳಿಗಳು. ಸದಾ ಕಾಡುವ ಅಥವಾ ಕೈ ಕೊಡುವ ಮಳೆ, ಭೂಮಿಯ ಒಳಹೊಕ್ಕು ಅಂಕುರವಿಡದ ಬೀಜಗಳು ಬೆಳೆದು ನಿಂತ ಬೆಳೆಗೆ ಕಾಟ ಕೊಡುವ ಕೀಟಗಳು, ಅವುಗಳನ್ನು ನಾಶ ಮಾಡದ ತುಟ್ಟಿ ಔಷಧಗಳು, ಒಳ್ಳೆಯ ಬೆಳೆ ಬಂದರೂ ಆ ಉತ್ಪನ್ನವನ್ನು ಮಾರು ಕಟ್ಟೆಗೆ ತರುವ ಒಳಗಾಗಿ ಬಿದ್ದುಹೋಗುವ ಬೆಲೆಗಳು.... ಒಂದೇ ಎರಡೇ ಹೀಗೆಲ್ಲ ಕೃಷಿ ಕ್ಷೇತ್ರದ ಸಮಸ್ಯೆಗಳನ್ನು ಪಟ್ಟಿ ಮಾಡುತ್ತ ಹೋಗಬಹುದು.

ಕೃಷಿಕ ಈಗ ಎದುರಿಸುತ್ತಿರುವ ಸಮಸ್ಯೆಗಳ ಮೂಲ ಹುಡುಕಿಕೊಂಡ ಹೊರಟರೆ ಅದರ ಬೇರುಗಳು ೧೯೬೦ ಮತ್ತು ೭೦ ರ ದಶಕದ ವರೆಗೆ ಇಳಿಯುತ್ತವೆ. ಅರವತ್ತರ ದಶಕದ ಉತ್ತರಾರ್ಧದಲ್ಲಿ ದೇಶದಲ್ಲಿ 'ಹಸಿರು ಕ್ರಾಂತಿ' ಆಂದೋಲನ ನಡೆಯಿತು. ಮಿಶ್ರತಳಿ ಬೀಜಗಳು ಮತ್ತು ರಸಗೊಬ್ಬರಗಳು ಈ ದೇಶದಲ್ಲಿ ಬಂದದ್ದು ಆಗಲೇ. ಆದರೆ ರಸಗೊಬ್ಬರಗಳ ಪರಿಣಾಮದಿಂದ ಹುಲುಸಾಗಿ ಬೆಳೆದ ಸಸ್ಯಗಳಿಗೆ ಕೀಟಗಳ ಹಾವಳಿಯೂ ಪ್ರಾರಂಭವಾಯಿತು. ಇದನ್ನು ಮೊದಲೇ ಅಂದಾಜು ಮಾಡಿದ್ದಂತೆ ಕೀಟನಾಶಕಗಳೂ ಮಾರುಕಟ್ಟೆ ಪ್ರವೇಶಿಸಿದುವು.

ಹಸಿರು ಕ್ರಾಂತಿ ಫಲವಾಗಿ ದೇಶವು ಆಹಾರ ಉತ್ಪಾದನೆಯಲ್ಲಿ ಸ್ವಾವಲಂಬಿ ಆಯಿತು. ಪ್ರಾರಂಭದಲ್ಲಿ ರೈತನಿಗೆ ತಕ್ಕಮಟ್ಟಿಗೆ ಆದಾಯವೂ ಬಂತು. ಆದರೆ ಉತ್ಪಾದನೆಯಲ್ಲಿ ಆದ ಹೆಚ್ಚಳದಿಂದಾಗಿ ಬೇಡಿಕೆ ಮತ್ತು ಪೂರೈಕೆ ನಡುವಣ ಅಂತರವೂ ಹೆಚ್ಚುತ್ತ ಹೋಯಿತು. ಹೆಚ್ಚುವರಿ ಉತ್ಪನ್ನವನ್ನು ರಫ್ತು ಮಾಡುವ ದಿಸೆಯಲ್ಲಿ ಆಗಿನ ಸರ್ಕಾರಗಳು ಯಾವುದೇ ಕ್ರಮ ತೆಗೆದುಕೊಳ್ಳದ ಕಾರಣ ದೇಶದ ಉಗ್ರಾಣಗಳಲ್ಲಿ ಆಹಾರಧಾನ್ಯಗಳ ಮೂಟೆಗಳು ಎತ್ತರೆತ್ತರವಾಗಿ ಪೇರಿಸಲ್ಪಡುತ್ತ ನಡೆದುವು.

೧೯೭೦ ರ ದಶಕದಲ್ಲಿ ಕರ್ನಾಟಕದಲ್ಲಿ ಭೂ ಸುಧಾರಣೆ ಕಾಯ್ದೆ ಜಾರಿಗೆ ಬಂತು. 'ಉಳುವವನೇ ಹೊಲದೊಡೆಯ' ಎಂಬ ಕ್ರಾಂತಿಕಾರಿ ಸಿದ್ಧಾಂತವನ್ನು ಆಗಿನ ಮುಖ್ಯಮಂತ್ರಿ ದೇವರಾಜ ಅರಸು ಕಾರ್ಯಾಚರಣೆಗೆ ತಂದರು. ಹಾಗಾಗಿ ಸಾಗುವಳಿ ಮಾಡುವವರಿಗೇ ಜಮೀನಿನ ಒಡೆತನ ಕೊಡುವ ಪ್ರಕ್ರಿಯೆಯಲ್ಲಿ ಕೃಷಿ ಹಿಡುವಳಿಗಳು ಚಿಕ್ಕದಾಗುತ್ತ ನಡೆದವು. ಇತ್ತ ದೇಶದ ಜನಸಂಖ್ಯೆಯೂ ಸ್ಫೋಟಕ ಹಂತ ತಲುಪಿ ಅಣ್ಣತಮ್ಮಂದಿರು

ಪಾಲು ಮಾಡಿಕೊಳ್ಳುತ್ತ ಕೃಷಿ ಭೂಮಿಯ ವಿಸ್ತಾರವನ್ನು ಕುಗ್ಗಿಸುತ್ತ ನಡೆದರು. ಹೀಗೆಲ್ಲ ಆಗಿ ಆರ್ಥಿಕವಾಗಿ ಲಾಭಕರ ಅಲ್ಲ ಎಂಬ ಹಂತಕ್ಕೆ ಹಿಡುವಳಿಗಳು ಚಿಕ್ಕದಾಗುತ್ತ ಬಂದು ರೈತ ಈಗಿನ ಸಂಕಷ್ಟಕ್ಕೆ ಸಿಲುಕುವಂತಾಯಿತು.

ರಾಜ್ಯದ ಕೃಷಿ ವಿಶ್ವವಿದ್ಯಾಲಯಗಳು ೧೯೯೮ ರಲ್ಲಿ ನಡೆಸಿದ ಒಂದು ಅಧ್ಯಯನದ ಪ್ರಕಾರ ಕನಿಷ್ಠ ೬ ರಿಂದ ೧೦ ಎಕರೆ ವರೆಗಿನ ನೀರಾವರಿ ಭೂಮಿ ಇದ್ದರೆ ಮಾತ್ರ ಅದರಲ್ಲಿ ಕೃಷಿ ಮಾಡುವುದು ಲಾಭಕರ ಎಂದು ಗೊತ್ತಾಗಿದೆ. ಕೇವಲ ಖುಷ್ಕಿ ಜಮೀನು ಇದ್ದರೆ ರೈತನಿಗೆ ಲುಕ್ಸಾನು ಆಗುವುದು ಖಾತ್ರಿ. ಜನವರಿ ೮ ರಂದು ಧಾರವಾಡ ಜಿಲ್ಲೆಯ ನವಲೂರಿನಲ್ಲಿ ನೇಣು ಹಾಕಿಕೊಂಡ ಮಹಾದೇವ ಬಾಣೆ ಅವರು ಕೇವಲ ಒಂದೂವರೆ ಎಕರೆ ಜಮೀನಿನ ಒಡೆಯರಾಗಿದ್ದರು. ಮತ್ತು ೧೮ ಮಂದಿ ಕುಟುಂಬದ ಸದಸ್ಯರನ್ನು ಸಲುಹಬೇಕಾಗಿತ್ತು ಎಂಬ ಅಂಶವನ್ನು ಈ ಕಾರಣಕ್ಕಾಗಿಯೇ ಇಲ್ಲಿ ಉಲ್ಲೇಖಿಸಬಹುದು. ಕಳೆದ ಜುಲೈ ತಿಂಗಳಲ್ಲಿ ಕೋಲಾರ ಜಿಲ್ಲೆಯ ಮಾಲೂರು ತಾಲ್ಲೂಕು ದೊಡ್ಡಶಿವಾರ ಗ್ರಾಮದಲ್ಲಿ ಸಾಮೂಹಿಕವಾಗಿ ಆತ್ಮಹತ್ಯೆ ಮಾಡಿಕೊಂಡ ಕೃಷ್ಣಾರೆಡ್ಡಿ ಮತ್ತು ಅವರ ಕುಟುಂಬದ ನಾಲ್ವರು ಸದಸ್ಯರ ಪಾಲಿಗೆ ಬಂದುದು ಸಹ ಕೇವಲ ೧.೫ ಎಕರೆ ಜಮೀನು. ಆತ್ಮಹತ್ಯೆ ಮಾಡಿಕೊಂಡ ರೈತರೆಲ್ಲ ಬಾಣೆ ಮತ್ತು ಕೃಷ್ಣಾರೆಡ್ಡಿ ಅವರ ಹಾಗೆಯೇ ಸಣ್ಣ ಹಿಡಿವಳಿದಾರರು.

ಕಾಲಾಂತರದಲ್ಲಿ ಮಳೆ ಕೈ ಕೊ ಡ ತೊ ಡ ಗಿ ದ ಂ ತೆ ರೈತರು ತಮ್ಮ ಹೊಲಗಳಲ್ಲಿ ಕೊಳವೆಬಾವಿ ತೋಡಿ ನೀರಾವರಿ ಮಾಡಲು ಹೊರಟರು. ಸರ್ಕಾರವೂ ಪ್ರಾರಂಭದಲ್ಲಿ ಪಂಪ್‌ಸೆಟ್‌ಗಳಿಗೆ ಧಾರಾಳವಾಗಿ ವಿದ್ಯುತ್ ಸಂಪರ್ಕ ನೀಡಿ ಉಚಿತವಾಗಿ ವಿದ್ಯುತ್‌ಅನ್ನೂ ಕೊಟ್ಟಿತು. ಆದರೆ ಭೂಮಿ ತಾಯಿ ಮಾತ್ರ ಮುಂಚೆ ತೋರಿದ ಕರುಣೆಯನ್ನು ಮುಂದುವರಿಸಿಕೊಂಡು ಹೋಗಲಿಲ್ಲ. ಕೇವಲ ೧೫.೨೦೦ ಅಡಿಗೇ ಒರತೆಯಾಗಿ ಚಿಮ್ಮುತ್ತಿದ್ದ ನೀರು ಬರುಬರುತ್ತ ಆಳಕ್ಕೆ ಇಳಿಯತೊಡಗಿತು. ಈಗ ಕೋಲಾರ ಜಿಲ್ಲೆಯಲ್ಲಿ ೬೦೦ ಅಡಿ ಆಳ ಕೊರೆದರೂ ನೀರು ಬರುವುದಿಲ್ಲ. ಹಾಗೆಂದು ರೈತರು ಸಾಲ ಮಾಡಿ ಕೊಳವೆ ಬಾವಿ ಕೊರೆಯುವುದನ್ನೇನೂ ನಿಲ್ಲಿಸಿಲ್ಲ! ರೈತರ ಆತ್ಮಹತ್ಯೆಗೆ ಕೊಳವೆಬಾವಿ ಕೊರೆಯುವುದೂ ಒಂದು ಕಾರಣ ಎಂದು ಸರ್ಕಾರ ಹೇಳುವುದು ನಿಜವಾಗಿಯೇ ಇದೆ. ಕೊಳವೆಬಾವಿ ತೋಡಲು ರೈತರು ಪ್ರಾಥಮಿಕ ಕೃಷಿ ಹಾಗೂ ಗ್ರಾಮೀಣಾಭಿವೃದ್ಧಿ ಬ್ಯಾಂಕಿಗೆ ಅರ್ಜಿ ಹಾಕಿಕೊಳ್ಳುತ್ತಾರೆ. ಅವರು ಕೊಡುವ ಸಾಲ ಸಾಕಾಗದು ಎಂದು ಗಿರವಿ ಅಂಗಡಿಗೆ ಹೋಗಿ ಮನೆ-ಜಮೀನು ಒತ್ತೆ ಇಡುತ್ತಾರೆ. ಗಿರವಿ ಅಂಗಡಿಯ ಬಡ್ಡಿಯು ಬೆಳೆಯುತ್ತ

ಹೋಗಿ ಸಾಲಗಾರ ರೈತನನ್ನೇ ನುಂಗಿ ನೊಣೆದು ಬಿಡುತ್ತದೆ. ಬ್ಯಾಂಕಿನವರು ಮತ್ತು ಗಿರವಿ ಅಂಗಡಿಯವರು ಕೂಡಿಯೇ ಒಂದು ರೈತನ ಆಸ್ತಿ-ಪಾಸ್ತಿ ಜತೆಗೆ ಮಾನವನ್ನೂ ಹರಾಜಿಗೆ ಇಡುತ್ತಾರೆ. ಕೋಲಾರ ಜಿಲ್ಲೆಯ ಕೃಷ್ಣಾರೆಡ್ಡಿ ಅವರು ೪೦.೦೦೦ ರೂಪಾಯಿ ಸಾಲ ಮಾಡಿದ್ದರೆ, ಮಹಾದೇವಪ್ಪ ಬಾಣೆ ಪಿಎಲ್‌ಡಿ ಬ್ಯಾಂಕಿನಲ್ಲಿ ೫.೦೦೦ ರೂಪಾಯಿ ಮತ್ತು ಖಾಸಗಿಯವರ ಬಳಿ ೨೦.೦೦೦ ರೂಪಾಯಿ ಸಾಲ ಮಾಡಿದ್ದರು. ಹಾವೇರಿ ಜಿಲ್ಲೆ ಸವಣೂರು ಬಳಿಯ ಚಿನ್ನನಬ ದಾನಿ ಗ್ರಾಮದಲ್ಲಿ ಆತ್ಮಹತ್ಯೆ ಮಾಡಿಕೊಂಡ ಬಸವನಗೌಡ, ರಂಗನಗೌಡ ಹೊಸಮನೆ ಎಂಬ ರೈತ ಪಿಎಲ್‌ಡಿ ಬ್ಯಾಂಕಿನ ೧೦.೦೦೦ ರೂಪಾಯಿ ಮತ್ತು ಖಾಸಗಿಯವರ ಬಳಿ ೭೦.೦೦೦ ರೂಪಾಯಿ ಸಾಲ ಮಾಡಿದ್ದರು.

ರೈತರು ಕೇವಲ ಕೃಷಿ ಉದ್ದೇಶಕ್ಕೆ ಮಾತ್ರ ಸಾಲ ಮಾಡುತ್ತಾರೆ ಎಂದಲ್ಲ. ಮನೆಯಲ್ಲಿ ಮಕ್ಕಳ ಮದುವೆ, ಶಿಕ್ಷಣ, ರೋಗ-ರುಜಿನ, ಹಬ್ಬ-ಹುಣ್ಣಿಮೆ ಹೀಗೆ ಒಂದಲ್ಲ ಒಂದು ಕಾರಣದಿಂದ ಅವರ ಇಡೀ ಜೀವನ ಸಾಲದ ಶೂಲಕ್ಕೆ ಕಟ್ಟಿಕೊಂಡೇ ನಡೆಯುತ್ತದೆ, ಈ ಕಾರಣಗಳಿಗಾಗಿ ಮಾಡುವ ಯಾವ ಖರ್ಚೂ ಉತ್ಪಾದಕವಲ್ಲದ ಕಾರಣ ಸಾಲ ಮರುಪಾವತಿ ಸಾಧ್ಯವೇ ಆಗುವುದಿಲ್ಲ. ಹೀಗಾಗಿ ವರ್ಷದಿಂದ ವರ್ಷಕ್ಕೆ ಬೆಳೆಯುತ್ತಲೇ ಹೋಗುವ ಸಾಲದ ಬಲೆ ಕೊನೆಗೆ ರೈತನ ಕೊರಳಿಗೆ ಉರುಳಾಗಿ ಪರಿಣಮಿಸುತ್ತದೆ. ೧೯೮೦ ರ ದಶಕದಲ್ಲಿ ರೈತರ ಎಲ್ಲ ಸಮಸ್ಯೆಗಳನ್ನು ಎತ್ತಿಹಿಡಿದು ಹೋರಾಟ ಮಾಡುತ್ತಿದ್ದ ರೈತ ಸಂಘ ಉಚ್ಛ್ರಾಯ ಸ್ಥಿತಿಯಲ್ಲಿ ಇತ್ತು. ಆಗ ರೈತರು ಎಂದರೆ ಭ್ರಷ್ಟರು ಮಾತ್ರವಲ್ಲ, ಎಲ್ಲರೂ ಹೆದರುತ್ತಿದ್ದರು. ಈಗ ನಾನಾ ಕಾರಣಗಳಿಂದಾಗಿ ರೈತ ಸಂಘವೂ ನಿರ್ವಿಣ್ಣವಾಗಿದೆ. ಅಲ್ಲಲ್ಲಿ ಒಂಟಿಧ್ವನಿಗಳು ಮಾತ್ರ ಉಳಿದಿವೆ.

ಹಾಗಾದರೆ ಇದಕ್ಕೆಲ್ಲ ಏನು ಕಾರಣ? ಇದಕ್ಕೆ ಇರುವುದು ರಾಜಕೀಯ ಪರಿಹಾರ ಮಾತ್ರ. ಆದರೆ ರೈತರ ಆತ್ಮಹತ್ಯೆಯಂಥ ಮಾನವೀಯ ಸಮಸ್ಯೆಯನ್ನು ರಾಜಕಾರಣಿಗಳು ತಮ್ಮ ಬೇಳೆ ಬೇಯಿಸಿಕೊಳ್ಳಲು ಒಂದು ವಿಷಯವಾಗಿ ಬಳಸಿಕೊಳ್ಳಲು ಹೆಚ್ಚು ಕಾತರರಾಗಿದ್ದಾರೆಯೇ ಹೊರತು ಅದಕ್ಕೆ ನೈಜ ಪರಿಹಾರ ಕಂಡುಹಿಡಿಯುವಲ್ಲಿ ಅವರಿಗೆ ಆಸಕ್ತಿ ಇರುವಂತೆ ಕಾಣದು. ಏಕೆಂದರೆ ಅಧಿಕಾರದಲ್ಲಿ ಇರುವಾಗ ಮತ್ತು ಇಲ್ಲದೇ ಇರುವಾಗ ಅವರ ವಾದ ವೈಖರಿ ಭಿನ್ನ ಆಗಿರುವುದೇ ಇದಕ್ಕೆ ಕಾರಣ.

ಹಿಂದೆ ಜನತಾದಳ ಸರ್ಕಾರ ಅಧಿಕಾರ ಇದ್ದಾಗ ಆತ್ಮಹತ್ಯೆ ಮಾಡಿಕೊಂಡ ರೈತರಿಗೆ ಪರಿಹಾರ ಕೊಡಬೇಕು ಎಂದು ಒತ್ತಾಯಿಸಿದ ಕಾಂಗ್ರೆಸ್ ಪಕ್ಷ ಈಗ ತಾನೇ ಅಧಿಕಾರದಲ್ಲಿ ಇದ್ದರೂ

ಅದೇ ಬೇಡಿಕೆಯನ್ನು ಈಡೇರಿಸುತ್ತಿಲ್ಲ. ಮಾಜಿ ಪ್ರಧಾನಿ ಎಚ್. ಡಿ. ದೇವೇಗೌಡರಂಥವರು ನವಲೂರು ಮತ್ತಿತರ ಕಡೆ ಈ ವರ್ಷದ ಪ್ರಾರಂಭದಲ್ಲಿ ರೈತರು ಆತ್ಮಹತ್ಯೆ ಮಾಡಿಕೊಂಡಾಗ ಸ್ಥಳಕ್ಕೆ ಧಾವಿಸಿ ತಮ್ಮ ಜೇಬಿನಿಂದ ತಲಾ ೧೦.೦೦೦ ರೂಪಾಯಿ ಪರಿಹಾರ ಕೊಟ್ಟು ಬಂದರು. ಅದರಿಂದ ದೇವೇಗೌಡರ ಪಕ್ಷಕ್ಕೆ ಲಾಭವಾದೀತು ಎಂದು ರಾಜ್ಯ ಸರ್ಕಾರ ಜಲಸಂಪನ್ಮೂಲ ಸಚಿವ ಎಚ್. ಕೆ. ಪಾಟೀಲರನ್ನು ಕಳುಹಿಸಿಕೊಟ್ಟು ತಲಾ ಒಂದೊಂದು ಲಕ್ಷ ರೂಪಾಯಿ ಪರಿಹಾರ ಘೋಷಿಸಿತು.

ಆದರೆ ಈ ಆತ್ಮಹತ್ಯೆ ಸರಣಿ ಮುಂದುವರಿದಂತೆ ರಾಜಕಾರಣಿಗಳ ಕಣ್ಣಿನ ನೀರೂ ಇಂಗಿಹೋಯಿತು. ನವಲೂರು ಪ್ರಕರಣದ ನಂತರ ಸುಮಾರು ೩೦ ಮಂದಿ ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಆದರೆ ವಿರೋಧ ಪಕ್ಷಗಳೂ ಅತ್ತ ಹೋಗಿಲ್ಲ, ಸರ್ಕಾರವೂ ಪರಿಹಾರ ನೀಡಿಲ್ಲ. ಸರ್ಕಾರವೇ ವಿಧಾನ ಸಭೆಯಲ್ಲಿ ಹೇಳಿಕೆ ನೀಡಿರುವ ಹಾಗೆ ಈ ವರ್ಷ ಕೇವಲ ಮೂವರಿಗೆ ಮಾತ್ರ ಪರಿಹಾರ ನೀಡಲಾಗಿದೆ. ಹಾಗಾದರೆ ಉಳಿದವರು ರೈತರಲ್ಲವೆ? ಅವರು ಸಾಲ ಮಾಡಿಲ್ಲವೆ ಎಂಬ ಪ್ರಶ್ನೆಗಳಿಗೆ ಸರ್ಕಾರದ ಬಳಿ ಉತ್ತರವಿಲ್ಲ. ಉತ್ತರ ಕಂಡುಹಿಡಿಯಲು ಆಯಾ ಉಪವಿಭಾಗಾಧಿಕಾರಿ ಪ್ರತಿಯೊಂದು ಪ್ರಕರಣದ ತನಿಖೆ ಮಾಡಿ ವರದಿ ಕೊಡಲಿದ್ದಾರೆ ಎಂದು ಮುಖ್ಯಮಂತ್ರಿ ಎಸ್. ಎಂ. ಕೃಷ್ಣ ಪ್ರಕಟಿಸಿದ್ದಾರೆ.

ಈ ಸಮೂಹ ಸನ್ನಿಯ ಬಗೆಗೆ ಸಾಮಾಜಿಕ, ಆರ್ಥಿಕ ಮತ್ತು ಮನೋವೈಜ್ಞಾನಿಕ ಕಾರಣಗಳನ್ನು ಪತ್ತೆ ಮಾಡಲು ಕೃಷಿ ವಿಶ್ವವಿದ್ಯಾಲಯದ ಮಾಜಿ ಕುಲಪತಿ ಡಾ॥ ಜಿ. ಕೆ. ವೀರೇಶ ನೇತೃತ್ವದಲ್ಲಿ ಆರು ಜನ ತಜ್ಞರ ಸಮಿತಿಯನ್ನೂ ರಚಿಸಲಾಗಿದೆ. ಹಿಂದಿನ ಜನತಾದಳ ಸರ್ಕಾರ ಸದನ ಸಮಿತಿಯನ್ನೇ ರಚಿಸಿತ್ತು. ಆತ್ಮಹತ್ಯೆ ಮಾಡಿಕೊಂಡ ರೈತರಿಗೆ ಪರಿಹಾರ ಕೊಡಬೇಕು ಎಂದು ಈ ಸಮಿತಿ ಶಿಫಾರಸು ಮಾಡಿತ್ತು.

ವಿಪರ್ಯಾಸ ಎಂದರೆ ಆತ್ಮಹತ್ಯೆ ಪ್ರಕರಣಗಳ ಬಗೆಗೆ ಸರ್ಕಾರ ಮ್ಯಾಜಿಸ್ಟ್ರೇಟ್ ತನಿಖೆಯನ್ನು ಆದೇಶಿಸಿದೆಯೇನೋ ನಿಜ. ಆದರೆ ಪರಿಹಾರ ಕೊಡುವ ಸಂಬಂಧದಲ್ಲಿ ಇದು ವರೆಗೆ ಯಾವುದೇ ಮಾನದಂಡಗಳನ್ನೂ ಗೊತ್ತುಪಡಿಸಿ ಕಂದಾಯ ಇಲಾಖೆಗೆ ಕಳುಹಿಸಿಕೊಟ್ಟಿಲ್ಲ. ಹಾಗೆ ನೋಡಿದರೆ ಕಂದಾಯ, ಕೃಷಿ ಮತ್ತು ಗೃಹ ಇಲಾಖೆಗಳ ನಡುವೆ ಈ ವಿಚಾರದ ಬಗೆಗೆ ದೊಡ್ಡ ಗೊಂದಲವೇ ಸೃಷ್ಟಿಯಾಗಿದೆ.

ರೈತರಿಗೆ ನಿಸರ್ಗ ಪ್ರಕೋಪದಿಂದ ಯಾವುದೇ ಹಾನಿಯಾದರೆ ಪರಿಹಾರ

ಕೊಡುವ ಅಧಿಕಾರ ಜಿಲ್ಲಾಧಿಕಾರಿಗಳಿಗೆ ಇದೆ. 'ನಿಸರ್ಗ ಪ್ರಕೋಪ'ದ ಬಗೆಗೆ ಅವರ ಬಳಿ ಮಾನದಂಡಗಳೂ ಇವೆ. ಅತಿವೃಷ್ಟಿಯಿಂದ ಬೆಳೆ ಹಾಳಾದರೆ ಎಕರೆಗೆ ೨೦೦ ರೂಪಾಯಿಗಳಿಂದ ೩೦೦ ರೂಪಾಯಿಗಳವರೆಗೆ ವಸ್ತುರೂಪದಲ್ಲಿ ಪರಿಹಾರ ಕೊಡಲಾಗುತ್ತಿದೆ. ಸಿಡಿಲುಬಡಿದು ಬೆಂಕಿ ಅನಾಹುತಗಳಲ್ಲಿ ಯಾರಾದರೂ ಸತ್ತರೆ ಅವರ ಕುಟುಂಬದ ಸದಸ್ಯರಿಗೆ ಒಂದು ಲಕ್ಷ ರೂಪಾಯಿಗಳವರೆಗೆ ಪರಿಹಾರ ಸಿಗುತ್ತದೆ. ಆದರೆ 'ಸಾಲ ಮರುಪಾವತಿ ಅಸಾಮರ್ಥ್ಯ'ದ ಕಾರಣವಾಗಿ ಆತ್ಮಹತ್ಯೆ ಮಾಡಿಕೊಳ್ಳುವ ಪ್ರಕರಣಗಳನ್ನು ಸರ್ಕಾರ ಇನ್ನೂ ಯಾವುದೇ ಮಾನದಂಡದ ಕಕ್ಷೆಯಲ್ಲಿ ಸೇರಿಸಿಲ್ಲ. ಹೀಗಾಗಿ ಪರಿಹಾರ ಕೊಡಲು ಬರುವುದಿಲ್ಲ ಎಂದು ಅಧಿಕೃತ ಮೂಲಗಳು ಕೈ ಚಾಡಿಸುತ್ತವೆ,

'ಧನ ಪರಿಹಾರ ಕೊಡುವುದರಿಂದ ರೈತರ ಸಮಸ್ಯೆಗಳು ನೀಗುವುದಿಲ್ಲ, ಬದಲಿಗೆ ಆತ್ಮಹತ್ಯೆಗೆ ಉತ್ತೇಜನ ನೀಡಿದಂತೆ ಆಗುತ್ತದೆ' ಎಂಬ ನಿಲುವನ್ನು ಸರ್ಕಾರ ತಾಳಿದೆ. ಈ ನಿಲುವನ್ನು ಸ್ವತಃ ಮುಖ್ಯಮಂತ್ರಿಗಳು ವಿಧಾನಸಭೆಯಲ್ಲಿಯೇ ವ್ಯಕ್ತಪಡಿಸಿದ್ದರು. ಅವರ ಜತೆಗೆ ವಿರೋಧಪಕ್ಷಗಳ ಕೆಲವರು ಸದಸ್ಯರೂ ಸಹಮತ ಹೊಂದಿದ್ದಾರೆ. ಈ ವಾದದ ಸಮರ್ಥಕರು ದೇಶದಲ್ಲಿಯೇ ಅತಿಹೆಚ್ಚು ಆತ್ಮಹತ್ಯೆ ಪ್ರಕರಣಗಳು ವರದಿಯಾಗುವ ಪಂಜಾಬ್ ರಾಜ್ಯದಲ್ಲಿ ಪರಿಹಾರ ಉತ್ತೇಜನವಾಗಿ ಪರಿಣಮಿಸಬಹುದು ಎಂಬ ಕಾರಣಕ್ಕಾಗಿ ಪರಿಹಾರ ಕೊಡುವುದನ್ನೇ ನಿಲ್ಲಿಸಲಾಗಿದೆ ಎಂಬ ಅಂಶವನ್ನು ಉಲ್ಲೇಖಿಸುತ್ತಾರೆ. ಆ ರಾಜ್ಯದಲ್ಲಿ ಒಂದು ವರ್ಷದಲ್ಲಿ ೨೦೦೦ ಮಂದಿ ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಾರೆ ಎಂದು ಅಂದಾಜು ಇದೆ.

ಪ್ರೊ. ಎಂ. ಡಿ. ನಂಜುಂಡಸ್ವಾಮಿ ಅವರಂಥ ರೈತ ಮುಖಂಡರು ಸಹ ಮೃತ ಕುಟುಂಬಗಳಿಗೆ ಪರಿಹಾರ ಕೊಡಬೇಕು ಎಂದು ವಾದಿಸುವುದಿಲ್ಲ. 'ಅದು ಏನಿದ್ದರೂ ತಾತ್ಕಾಲಿಕ ಪರಿಹಾರ. ಅದರ ಬದಲಿಗೆ ರೈತರನ್ನು ಮುತ್ತಿ ಕಾಡುವ ಮೂಲಭೂತ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವುದೇ ಖಾಯಂ ಆಗಿ ಆತ್ಮಹತ್ಯೆ ಪಿಡುಗಿಗೆ ಉತ್ತರ' ಎಂದು ಅವರು ವಾದಿಸುತ್ತಾರೆ.

ಸರ್ಕಾರ ನಿಗಮ-ಮಂಡಲಿಗಳಿಗೆ ಅಧ್ಯಕ್ಷರನ್ನು ನೇಮಕ ಮಾಡಿ ಪ್ರತಿ ತಿಂಗಳಿಗೆ ಒಂದೊಂದು ನಿಗಮದಿಂದಲೇ ಎರಡು ಲಕ್ಷ ರೂಪಾಯಿಗಳಷ್ಟು ಹೆಚ್ಚಿನಹೊರೆ ಹೊರಲು ಸಿದ್ಧವಾಗಿದೆ. ಆದರೆ ರೈತರ ಕುಟುಂಬಗಳಿಗೆ ಪರಿಹಾರ ನೀಡಲು ಹಿಂದೇಟು ಹಾಕುತ್ತಿದೆ ಎಂದು ವಾದಮಾಡುವವರೂ ಇಲ್ಲ ಎಂತಲ್ಲ,

ನಿಜ, ಸತ್ತವರ ಕುಟುಂಬಗಳಿಗೆ ಪ ರಿ ಹಾ ರ ಕೊಡುವುದು ತಾತ್ಕಾಲಿಕ ಪರಿಹಾರ ಇರಬಹುದು. ಹೀಗೆ ಒಬ್ಬಿಬ್ಬರಿಗೆ ಪರಿಹಾರ

ಕೊಡುವ ಬದಲು ಗ್ರಾಮೀಣ ಪ್ರದೇಶದಲ್ಲಿ ವಾಸವಾಗಿರುವ ಶೇ. ೭೦ ರಷ್ಟು ರೈತ ಸಮುದಾಯದ ಬದುಕು ಹಸನಾಗಲು ಏನು ಮಾಡಬಹುದು?

ಈ ಪ್ರಶ್ನೆಗೆ ಉತ್ತರಕ್ಕಾಗಿ ತಡಕಾಡಿದವರು ಇಲ್ಲ ಎಂದು ಅಲ್ಲ. ಅವರು ಸೂಚಿಸಿದ ಪರಿಹಾರಗಳು ಅನುಷ್ಠಾನಗೊಂಡಿಲ್ಲ ಅಷ್ಟೇ. ದೇಶಕ್ಕೆ ಐವತ್ತು ವರ್ಷ ಗಳ ಹಿಂದೆ ಸ್ವಾತಂತ್ರ್ಯ ಬಂದರೂ ಕೃಷಿ ಕ್ಷೇತ್ರ ಮಾತ್ರ ಕೊಳ್ಳುವವರ ಮಾರು ಕಟ್ಟೆಯಾಗಿಯೇ ಉಳಿಯಿತು. ಉಳಿದ ವಸ್ತುಗಳೆಲ್ಲ ಮಾರುವವರ ಮಾರುಕಟ್ಟೆ ಯಾದುವು. ಒಂದು ಬೆಂಕಿಪೊಟ್ಟಣಕ್ಕೂ ತನ್ನದೇ ಆದ ಬೆಲೆಯನ್ನು ತಯಾರಕ ನಿಗದಿ ಮಾಡಬಹುದು. ಆದರೆ ರೈತನ ಉತ್ಪನ್ನಗಳ ಬೆಲೆಗೂ ಆತ ಅದಕ್ಕೆ ಮಾಡುವ ಖರ್ಚಿಗೂ ತಾಳಮೇಳವೇ ಇಲ್ಲದಂಥ ಸ್ಥಿತಿ ಇದೆ.

ಕೃಷಿ ಒಂದು ಮುಕ್ತ ಮಾರುಕಟ್ಟೆಯೂ ಅಲ್ಲ. ರೈತ ತಾನು ಬೆಳೆದ ಬೆಳೆ ಗಳನ್ನು ತಂದು ಗ್ರಾಹಕನಿಗೆ ಮಾರುವ ಸ್ಥಿತಿ ಇಲ್ಲ. ಹೀಗೆ ಮಾರಾಟ ಮಾಡು ವುದೇ ಇಲ್ಲ ಎಂದು ಅಲ್ಲ. ಆದರೆ ರೈತನ ಉತ್ಪನ್ನಗಳು ಮಾರುಕಟ್ಟೆಗೆ ಬರುವ ವೇಳೆಗಾಗಲೇ ಮಧ್ಯವರ್ತಿ ಪ್ರತ್ಯಕ್ಷನಾಗಿರುತ್ತಾನೆ. ಮಧ್ಯವರ್ತಿಯ ಲಾಭಾಂಶವೇ ಭಾರಿಯಾಗಿದ್ದು ಆತ ಇಡುವ ಬೆಲೆ ರೈತನಿಗೂ ಲಾಭಕರ ಅಲ್ಲ. ಗ್ರಾಹಕನಿಗೂ ಪ್ರಯೋಜನಕಾರಿಯಲ್ಲ. ಹೀಗಾಗಿಯೇ ಸೋನಾಮಸೂರಿಯಂಥ ಅಕ್ಕಿಯ ಬೆಲೆ ಮಾರುಕಟ್ಟೆಯಲ್ಲಿ ಈಗಲೂ ಕೇಜಿಗೆ ೧೮ ರೂಪಾಯಿ ಇದ್ದರೆ ಅದನ್ನು ಬೆಳೆಯುವ ರೈತನಿಗೆ ಆರೆಂಟು ರೂಪಾಯಿಗಳೂ ಸಿಗುವುದಿಲ್ಲ. ರೈತ ನೇರವಾಗಿ ಗ್ರಾಹಕನಿಗೆ ತನ್ನ ಉತ್ಪನಗಳನ್ನು ಮಾರಾಟ ಮಾಡುವಂಥ 'ರೈತ ಬಜಾರ್, ವ್ಯವಸ್ಥೆಯನ್ನು ಎಲ್ಲ ಜಿಲ್ಲಾ ಮಟ್ಟದಲ್ಲಿ ಜಾರಿಗೆ ತರಲಾಗುವುದು ಎಂಬ ಸರ್ಕಾರದ ಘೋಷಣೆ ಕಳೆದ ಎರಡು ವರ್ಷಗಳಿಂದ ಕೇವಲ ಪತ್ರಿಕಾ ಹೇಳಿಕೆಗಳಿಗೆ ಮಾತ್ರ ಸೀಮಿತವಾಗಿದೆ. ಈ ವ್ಯವಸ್ಥೆ ಆಂಧ್ರಪದೇಶದಲ್ಲಿ ಯಶಸ್ವಿ ಯಾಗಿ ಅನುಷ್ಠಾನಗೊಂಡಿದೆ.

ರೈತರ ಉತ್ಪನ್ನಗಳು ಮಾರುಕಟ್ಟೆಗೆ ಬರುವ ವೇಳೆಗೆ ಬೆಲೆಗಳು ಬಿದ್ದು ಹೋಗಬಾರದು ಎಂದು ಸರ್ಕಾರ ಬೆಂಬಲ ಬೆಲೆ ನಿಗದಿ ಮಾಡುತ್ತದೆ. ಅದಕ್ಕೆ ಪೂರಕವಾಗಿ ಕರ್ನಾಟಕ ಸರ್ಕಾರವೂ ಮಾರುಕಟ್ಟೆ ಮಧ್ಯ ಪ್ರವೇಶಕ್ಕಾಗಿಯೇ ೨೦೦ ಕೋಟಿ ರೂಪಾಯಿಗಳ ರೈತ ಕಲ್ಯಾಣ ನಿಧಿಯನ್ನೂ ಸ್ಥಾಪಿಸಿದೆ. ಕಳೆದ ವರ್ಷ ಭರಪೂರ ಬೆಳೆದ ಮೆಕ್ಕೆಜೋಳವನ್ನು ಕೇಂದ್ರ ಆಹಾರ ನಿಗಮದ (ಎಫ್‌ಸಿಐ) ನೆರವಿನಿಂದ ಖರೀದಿಸುವ ಭಾರಿ ಕಾರ್ಯಕ್ರಮವೊಂದನ್ನು ಕರ್ನಾಟಕ ಸರ್ಕಾರ ತಕ್ಕಮಟ್ಟಿಗೆ ಯಶಸ್ವಿಯಾಗಿಯೇ ನಡೆಸಿತು. ಅದಕ್ಕೆ ಕೇಂದ್ರ ಸರ್ಕಾರದ ಆಹಾರ ಇಲಾಖೆಯೂ ಉದಾರವಾಗಿ ಸ್ಪಂದಿಸಿತು. ಹೀಗಾಗಿ ಮಾರುಕಟ್ಟೆಯಲ್ಲಿ

ಮೆಕ್ಕೆಜೋಳದ ಬೆಳೆ ತೀರಾ ಬಿದ್ದುಹೋಗಬಾರದು ಎಂದರೆ ಧಾನ್ಯ ದಾಸ್ತಾನಿಗೆ ಉಗ್ರಾಣಗಳು ಬೇಕು. ಅದಕ್ಕಿಂತ ಮುಖ್ಯವಾಗಿ ರಾಶಿ ಮಾಡಿದ ಧಾನ್ಯವನ್ನು ಮಾರುಕಟ್ಟೆಗೆ ತರುವ ಧಾವಂತ ತೋರದೆ ಮನೆಯ ಹಗೆವುಗಳಲ್ಲಿಯೇ ಧಾನ್ಯ ಸಂರಕ್ಷಿಸಿ ಇಡುವಂಥ ಆರ್ಥಿಕ ಚೈತನ್ಯ ರೈತರಿಗೆ ಬರಬೇಕು. ಬೇಗನೇ ನಾಶ ವಾಗಿಬಿಡುವಂಥ ತರಕಾರಿ ಮತ್ತಿತರ ಬೆಳೆಗಳನ್ನು ರಕ್ಷಿಸಿ ಇಡಲು ರಾಜ್ಯದ ಉದ್ದಗಲಕ್ಕೂ ಶೈತ್ಯಾಗಾರ ಸರಪಳಿ ಇರಬೇಕು. ರೈತರು ಗಿರವಿ ಅಂಗಡಿಗಳ ಗಳ ಬಳಿ ಸಾಲಕ್ಕೆ ಧಾವಿಸದಂತೆ ತಡೆಯಲು ಅವರಿಗೆ ಬೆಳೆ ಸಾಲಗಳ ಜತೆಗೆ 'ಬಳಕೆ' ಸಾಲಗಳೂ ದೊರೆಯುವಂತಾಗಬೇಕು. ರೈತರು ಎಲ್ಲರೂ ಒಂದೇ ಬೆಳೆ ಯನ್ನು ಬೆಳೆಯದೇ 'ಬೆಳೆ ವಿಧಾನ'ವನ್ನು ಕಟ್ಟುನಿಟ್ಟಾಗಿ ಅನುಸರಿಸಿ ಕೃಷಿ ಉತ್ಪನ್ನಗಳಲ್ಲಿ ಸಮತೋಲ ಸಾಧಿಸಬೇಕು. ನೀರಾವರಿ ಪಂಪ್‌ಸೆಟ್‌ಗಳಿಗೆ ಬಳಕೆ ಯಾಗುವ ವಿದ್ಯುತ್ ಶುಲ್ಕ ವಿಧಿಸುವಾಗ ಸಣ್ಣ ರೈತರಿಗೆ ರಿಯಾಯ್ತಿ ತೋರಿಸ ಬೇಕು. ದೊಡ್ಡ ರೈತರಿಗೆ ಶುಲ್ಕ ವಿಧಿಸಬೇಕು. ಕೃಷಿ ಉತ್ಪನ್ನಗಳ ಆಮದು ಮತ್ತು ರಫ್ತು ನಿರ್ಧಾರಗಳು ರಾಜಕೀಯ ಇಷ್ಟಾನಿಷ್ಟಗಳನ್ನು ಅವಲಂಬಿಸದೆ ವಾಸ್ತವ ಸ್ಥಿತಿಯನ್ನು ಅಲಂಬಿಸಿಬೇಕು. ಕೈಗಾರಿಕಾ ಕ್ಷೇತ್ರಕ್ಕೆ ಸಾಲ ನೀಡಲು ಹಾತೊರೆಯುವ ಹಣಕಾಸು ಸಂಸ್ಥೆಗಳು ಕೃಷಿ ಕ್ಷೇತ್ರಕ್ಕೂ ಅದೇ ಔದಾರ್ಯ ತೋರ ಬೇಕು.... ಹೀಗೆ ಈ ಪಟ್ಟಿಯನ್ನು ಲಂಬಿಸುತ್ತಲೇ ಹೋಗಬಹುದು. ಆದರೆ ಎಲ್ಲಕ್ಕಿಂತ ಮುಖ್ಯವಾಗಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು 'ಕೃಷಿ' ವಲಯ ಯಾರಿಗೆ ಸೇರಿದ್ದು ಎಂಬ ಬಗೆಗೆ ಹೊಣೆ ಹಾರಿಸುತ್ತ ಮೈಮರೆ ಯುವ ಬದಲು ನಿಜವಾಗಿಯೂ ದೇಶದ ಬೆನ್ನೆಲುಬು ಅನಿಸಿರುವ ರೈತನನ್ನು ಉಳಿಸುವ ರಾಜಕೀಯ ಇಚ್ಛಾಶಕ್ತಿಯನ್ನು ಪ್ರದರ್ಶಿಸಬೇಕು. ★

('ಸುಧಾ' ಸಾಭಾರ)

ವಾಚಕ ಮಿತ್ರರಲ್ಲಿ ವಿನಂತಿ.

"ಜನಪದ ವಿಚಾರ"ದ ಈ ಸಂಚಿಕೆಯನ್ನು ನಿಮ್ಮ ಬಳಿಗೆ ತಲುಪಿ ಸುವ ಸ್ವಾತಂತ್ರ್ಯವನ್ನು ಪಡೆದುಕೊಂಡಿದ್ದೇವೆ! ಅನೇಕ ವರ್ಷಗಳ ನಂತರ ಪುನಃ ಪತ್ರಿಕೆ ದಿನದ ಬೆಳಕನ್ನು ಕಂಡಿದೆ - ಹೊಸ ಶತಮಾನದ, ಹೊಸ ಸಹಸ್ರಮಾನದ ಸಂಕ್ರಾಂತಿ ಕಾಲದ ಪ್ರೇರಣೆಯೊಂದಿಗೆ. ದಯಮಾಡಿ ವಾರ್ಷಿಕ ಚಂದಾ ೧೦೦/- ರೂ. ಗಳನ್ನಾಗಲೀ ಇಲ್ಲವೇ ಈ ಪತ್ರಿಕೆಯ ಮುಖಬೆಲೆ ೧೦/- ರೂ. ಗಳನ್ನಾಗಲೀ ನಿಮ್ಮ ಇಚ್ಛೆಗನುಸಾರವಾಗಿ ಕಳುಹಿಸಿ ಈ ಪತ್ರಿಕೆಯ ಬೆಳವಣಿಗೆಗೆ ಪ್ರೋತ್ಸಾಹಿಸಬೇಕಾಗಿ ಕೋರಿಕೆ.

-ಪ್ರಕಾಶಕರು

ನಮ್ಮ ಪೂರ್ವಜರ ರಾಜನೀತಿ ಶಾಸ್ತ್ರ

- ಪ್ರೊ. ಎಸ್. ಕೆ. ರಾಮಚಂದ್ರರಾವ್

ನಮ್ಮ ದೇಶದಲ್ಲಿ ಆಡಳಿತ ಕುರಿತ ಆಲೋಚನೆ ಕ್ರಿಸ್ತ ಪೂರ್ವ ಯುಗದಿಂದಲೇ ಬೆಳೆದುಬಂದಿದೆ. ಮಹಾಭಾರತದಲ್ಲಿ ಯುಧಿಷ್ಠಿರನು ಭೀಷ್ಮನನ್ನು ಕೇಳುವ ಪ್ರಶ್ನೆ ಮೂಲಭೂತವಾದುದು. "ಎಲ್ಲ ಮನುಷ್ಯರಂತೆಯೇ ದೈಹಬಲ, ಬುದ್ಧಿಬಲಗಳನ್ನು ಹೊಂದಿರುವ ಒಬ್ಬ ಮನುಷ್ಯ ರಾಜನಾಗಿ ಇತರರನ್ನು ಆಳುವುದು ಹೇಗೆ?" ಆಡಳಿತದ ಇನ್ನೊಂದು ಪ್ರಾಚೀನವಾದ ಹೆಸರು ರಾಜ ಎನ್ನುವುದು. ಇದು ದೈವದತ್ತವಾದ ಅಧಿಕಾರವೋ, ಸಮಾಜದ ಒಪ್ಪಂದದಿಂದ ಏರ್ಪಟ್ಟ ವ್ಯವಸ್ಥೆಯೋ ಎನ್ನುವುದು ಇಲ್ಲಿ ಬಂದಿರುವ ಸಮಸ್ಯೆ. ಪ್ರಾಚೀನ ಚಿಂತಕರು ಇದನ್ನು ದೈವದತ್ತವಾದದ್ದೆಂದು ನಂಬಲಿಲ್ಲ. ಮಧ್ಯಯುಗದಲ್ಲಿ ತೋರಿಕೊಂಡ ಕಲ್ಪನೆ ಇದು. ಆಡಳಿತದ ವಿಚಾರವಾಗಿ ನಡೆದಿರುವ ಚಿಂತನೆಗಳು ಮುಖ್ಯವಾದ ಘಟ್ಟವನ್ನು ಮುಟ್ಟಿದ್ದು ಕೌಟಿಲ್ಯನ ಅರ್ಥಶಾಸ್ತ್ರದಲ್ಲಿ.

ರಾಜನೊಬ್ಬನೇ ಇಡೀ ರಾಜ್ಯದ ಯೋಗಕ್ಷೇಮವನ್ನು ನೋಡಿಕೊಳ್ಳುವುದು ಸಹಜವಾಗಿಯೇ ಸಾಧ್ಯವಿರದು. ಅವನ ಪರವಾಗಿ ಒಂದು ಆಡಳಿತ ಮಂಡಳಿಯೇ ಏರ್ಪಡಬೇಕು. ಜನರ ಆರ್ಥಿಕ, ಸಾಮಾಜಿಕ, ಧಾರ್ಮಿಕ, ಲೌಕಿಕ, ಪಾರಮಾರ್ಥಿಕ ಹಿತವನ್ನು ಸಾಧಿಸಲು ಸಮಾಜದ ವರ್ಗೀಕರಣ; ರಾಜಕೀಯ ಉದ್ದೇಶಗಳ ನಿರ್ಧಾರ; ಶಾಸಕಾಂಗ ವ್ಯವಸ್ಥೆ; ನ್ಯಾಯಾಂಗದ ಏರ್ಪಾಟು; ಕಾರ್ಯಾಂಗದ ಸಂಸ್ಥೆಗಳು; ಆಡಳಿತದ ಶ್ರೇಣೀಕೃತ ವ್ಯವಸ್ಥೆ; ರಕ್ಷಣೆ, ಕಾನೂನು ಮೊದಲಾದ ಬೇರೆ ಬೇರೆ ವಿವರಗಳ ಸಲುವಾಗಿ ಆಡಳಿತವು ಬಹುಮುಖವಾಗಬೇಕಾಯಿತು. ಆದರೆ ಇದೆಲ್ಲವೂ ಅಳರಸನಲ್ಲಿ ಕೇಂದ್ರೀಕೃತವಾಗಿರದಿದ್ದರೆ ಆಡಳಿತ ಸಮರ್ಥವಾಗಿ, ಸ್ಥಿರವಾಗಿ, ಪ್ರಾಮಾಣಿಕವಾಗಿ ಇರಲಾರದು. ಆಡಳಿತದ ಹೊಣೆ ಅರಸನದ್ದಾದರೂ ಆಡಳಿತದ ಉದ್ದೇಶ್ಯ ಎಲ್ಲ ಪ್ರಜೆಗಳ ಸರ್ವಾಂಗೀಣ ಹಿತಸಾಧನೆ.

ಹತ್ತನೆಯ ಶತಮಾನದ "ನೀತಿವಾಕ್ಯಾಮೃತನೆಂಬ" ಗ್ರಂಥ ಆಡಳಿತದ ಸ್ವರೂಪವನ್ನು ವಿವೇಚಿಸುತ್ತಿದೆ. ಅದನ್ನು ರಚಿಸಿದವರು ಸೋಮದೇವಸೂರಿ ಎಂಬ ಜೈನ ಕವಿ. ಗ್ರಂಥಾರಂಭದ ಒಕ್ಕಣೆಯೇ ಸ್ವಾರಸ್ಯವಾಗಿದೆ. "ಅಥ ಧರ್ಮಾರ್ಥಕಾಮಫಲಾಯ ರಾಜ್ಯಾಯ ನಮಃ" ರಾಜ್ಯವನ್ನೇ ಅವನು ನಮಸ್ಕರಿಸಿ ಗ್ರಂಥವನ್ನು ಆರಂಭಿಸುತ್ತಾನೆ. ರಾಜ್ಯವೆಂದರೆ ಆಡಳಿತ. ಅದು ಜನರೆಲ್ಲರ ಪುರುಷಾರ್ಥಗಳೆಲ್ಲವನ್ನೂ ಸಾಧಿಸುವ ಪ್ರಯೋಜನವುಳ್ಳದ್ದೆಂದು

ಅವನು ಮೊದಲಲ್ಲೆ ಸ್ಪಷ್ಟಪಡಿಸುತ್ತಾನೆ ಮತ್ತು ಆಡಳಿತವು ಯೋಗ್ಯವಾಗಿ, ಆದರಣೀಯವಾಗಿ ಎಲ್ಲರ ವಿಶ್ವಾಸಕ್ಕೂ ಪಾತ್ರವಾಗಿರಬೇಕೆಂದರೆ ಎಲ್ಲರನ್ನೂ ಒಂದೇ ಬಗೆಯಾಗಿ ನೋಡುವ ಮನೋಧರ್ಮ ಆಡಳಿತದಲ್ಲಿ ಬೇರೂರಬೇಕು. ಸೋಮದೇವಸೂರಿಯ ಮಾತಿನಲ್ಲಿ:-

ಸರ್ವಸತ್ತ್ವೇಷು ಹಿ ಸಮತಾ ಸರ್ವಾಚರಣಾನಾಂ ಪರಮಾಚರಣಾ

ಸರ್ವಜೀವಸಮತಾ ಎನ್ನುವ ತತ್ವ ಧಾರ್ಮಿಕ ನೆಲೆಯಲ್ಲಿ ಮಾತ್ರವಲ್ಲ, ಸಮಾಜದ ಸುಸ್ಥಿತಿಯಲ್ಲೂ ಮುಖ್ಯವಾದದ್ದು. ಆಡಳಿತ ಇದನ್ನೇ ಎತ್ತಿಹಿಡಿಯ ಬೇಕಾದುದು. ಒಬ್ಬೊಬ್ಬ ಪ್ರಜೆಯು ಮೂರು ಪುರುಷಾರ್ಥಗಳನ್ನೂ (ಅರ್ಥ, ಕಾಮ, ಧರ್ಮ) ಸಮನಾಗಿಯೆ ಸಾಧಿಸಬೇಕಾದುದು ಆಡಳಿತದ ಕರ್ತವ್ಯವೆಂದು ಸೋಮದೇವಸೂರಿ ಹೇಳುತ್ತಾನೆ,

ಸರ್ವಂ ವಾ ತ್ರಿವರ್ಗಂ ಸರ್ವತಃ ಧರ್ಮಾರ್ಥಾ
ವಿರೋಧೇನ ಕಾಮ ಸೇವೇತ ತತಃ ಸುಖೀ ಸ್ಯಾತ್॥

ಪ್ರತಿಯೊಬ್ಬ ಪ್ರಜೆಯ ಬಯಕೆಗಳನ್ನು ಈಡೇರಿಸುವುದೂ ಆಡಳಿತದ ಹೊಣೆಯೇ. ಆದರೆ ಈ ಬಯಕೆಗಳು ಧರ್ಮಕ್ಕಾಗಲೀ ಅರ್ಥಕ್ಕಾಗಲೀ ಅಡ್ಡಿ ಬರದಂತೆ ನೋಡಿಕೊಳ್ಳಬೇಕಾದುದು ಆಡಳಿತವೇ. ಹೀಗೆಂದೇ ಶಿಷ್ಟರಕ್ಷಣೆ, ದುಷ್ಟ ಶಿಕ್ಷೆ, ಪ್ರಜೆಗಳ ಹಿತವನ್ನು ಕಾಪಾಡಿಕೊಳ್ಳಲಾರದವನು ಆಳರಸನೇ ಅಲ್ಲ.

ಸ ಕಿಂ ರಾಜಾಯೋ ನ ರಕ್ಷತಿ ಪ್ರಜಾಃ?

ಈ ಇಬ್ಬಗೆಯ ಹೊಣೆಯನ್ನು ತೀರಿಸಿಕೊಳ್ಳಲು ಆಡಳಿತಕ್ಕೆ ಕ್ರಮವೂ ಇರಬೇಕು, ವಿಕ್ರಮವೂ ಇರಬೇಕು.

ರಾಜ್ಯಸ್ಯ ಮೂಲಂ ಕ್ರಮೋ ವಿಕ್ರಮಶ್ಚ

ಪ್ರಾಮಾಣಿಕರಾದ, ಸಂಭಾವಿತರಾದ ಪ್ರಜೆಗಳನ್ನು ಕಾಪಾಡಲು ಆಡಳಿತ ದಲ್ಲಿ ಕ್ರಮ ಇರಬೇಕು. ಇದರಲ್ಲಿ ಕೌಟಿಲ್ಯ ಹೇಳುವ ವರ್ಗೀಕರಣ, ಶ್ರೇಣೀ ಕರಣ, ನ್ಯಾಯಾಂಗ ವ್ಯವಸ್ಥೆ, ಶಾಸಕಾಂಗ ವ್ಯವಸ್ಥೆ, ಕಾರ್ಯಾಂಗದ ವಿಭಾಗ, ಅಮಾತ್ಯರ ಆಯ್ಕೆ ಮೊದಲಾದುವೆಲ್ಲ ಸೇರುತ್ತವೆ.

ಕೌಟಿಲ್ಯನು 'ಕಂಟಕಶೋಧಕ' ಎಂಬ ಆಡಳಿತ ವಿಭಾಗವನ್ನು ಸೂಚಿಸು ತ್ತಾನೆ. ಮುಳ್ಳುಗಳನ್ನು ತೆಗೆದು, ಆಡಳಿತದ ದಾರಿಯನ್ನು ಸುಗಮವನ್ನಾಗಿ ಮಾಡುವ ವಿಭಾಗ ಇದು. ಆಡಳಿತಕ್ಕೆ ಮುಳ್ಳುಗಳು ಎಂದರೆ ರಾಜಕೀಯ ವಾಗಿ, ಸಾಮಾಜಿಕವಾಗಿ ನೆಮ್ಮದಿಯನ್ನು ಕದಡುವ ಪ್ರಯತ್ನಗಳು; ಅಪ್ರಾಮಾಣಿಕ ರಾದ, ಕ್ರೂರರಾದ ಅಧಿಕಾರಿಗಳು; ತಮ್ಮ ಹೊಣೆಯನ್ನರಿಯದೆ ದುರ್ವರ್ತನೆ

ಯಲ್ಲಿ ತೊಡಗುವ ಅಧಿಕಾರಿಗಳು; ಜನರ ಹಿತವನ್ನು ಕಡೆಗಾಣಿಸಿ ಸ್ವಾರ್ಥಪರ ರಾದ ಅಧಿಕಾರಿಗಳು. ಅವರ ಗುಂಪಿನಲ್ಲೇ ಕೌಟಿಲ್ಯನು ಕಳ್ಳರನ್ನೂ, ದರೋಡೆ ಕಾರರನ್ನೂ, ಕೊಲೆಗಾರರನ್ನೂ, ಪ್ರಜಾಹಿಂಸಕರನ್ನೂ ಸೇರಿಸುತ್ತಾನೆ. ಆ ವಿಭಾಗ ವನ್ನು ನೋಡಿಕೊಳ್ಳಲು ಮೂವರು ಪ್ರದೇಷ್ಟ್ರುಗಳನ್ನು ಎಂದರೆ ಅಮಾತ್ಯ ರನ್ನು ನೇಮಿಸಬೇಕೆಂದೂ, ಅವರ ನೆರವಿಗೆ ನ್ಯಾಯಮಂಡಳಿಯಿರಬೇಕೆಂದೂ ಅವನ ಸೂಚನೆ. ಆಡಳಿತದಲ್ಲಿ ದುರಾಚಾರವನ್ನು ಬೇಗನೇ ತಡೆಗಟ್ಟಲು ಇದ ರಿಂದ ಸಾಧ್ಯವಾದೀತೆಂದು ಅವನ ಆಶಯ.

ಹೀಗೆ ಕ್ರಮದೊಂದಿಗೆ ವಿಕ್ರಮವೂ ಸೇರಿಕೊಳ್ಳಬೇಕೆಂದು ಸೋಮದೇವ ಸೂರಿ ಹೇಳಿರುವುದನ್ನು ಗಮನಿಸಬೇಕು. ಕೌಟಿಲ್ಯನೂ ಇದನ್ನು ಸ್ಪಷ್ಟಪಡಿಸಿ, ರಾಜ್ಯದ ಆಡಳಿತವೆಂದರೆ ಮುಖ್ಯವಾಗಿ ದಂಡನೀತಿಯೆ ಎನ್ನುತ್ತಾನೆ. ತಪ್ಪು ಮಾಡಿದವರು ಪ್ರಜೆಗಳೇ ಆಗಿರಲಿ, ಅಧಿಕಾರಿಗಳೇ ಆಗಿರಲಿ ಅವರನ್ನು ಶಿಕ್ಷೆಗೆ ಒಳಪಡಿಸುವ ಹೊಣೆಗಾರಿಕೆ ಆಡಳಿತಕ್ಕಿರಬೇಕು ಎಂದು ಅವನ ವಾದ. ಸನ್ನಿ ಧಾತಾ ಎಂದರೆ ರಾಜನ ಹತ್ತಿರ ಇದ್ದು ರಾಜ್ಯದ ಹಿತಚಿಂತನೆ ಮಾಡುವ ಅಧಿಕಾರಿ ಎಂಬುವವನೊಂದಿಗೆ ಸಮಾಹರ್ತ (ಮಹಾಸಂಗ್ರಹಣಾಧಿಕಾರಿ) ಎಂಬ ಇನ್ನೊಬ್ಬ ಅಧಿಕಾರಿಯೂ ಇರಬೇಕೆಂದು ಸೂಚಿಸುತ್ತಾನೆ. ಅವನು ಈಗಿನ ರೆವಿನ್ಯೂ ಅಧಿಕಾರಿ ಇದ್ದಂತೆ. ಅವನ ನೆರವಿಗೆ ಇರುವವನೇ ಮೇಲೆ ಹೇಳಿದ ಪ್ರದೇಷ್ಟ್ರ. ಅವರು ಈಗಿನ ಆಯುಕ್ತರಿದ್ದಂತೆ. ಅವರಿಗೆ ಪ್ರಾಮಾಣಿಕತೆ, ಧೈರ್ಯ, ಸಾಮರ್ಥ್ಯ, ಯುಕ್ತಾಯುಕ್ತ ವಿವೇಚನೆ, ಕಾರ್ಯದಕ್ಷತೆಗಳಿರಬೇಕೆನ್ನುವ ಕಾರಣದಿಂದಲೇ ವಿಕ್ರಮ ಎನ್ನುವ ಹೆಸರು.

ಕೌಟಿಲ್ಯ 'ಒಂದೇ ಚಕ್ರ ಹೇಗೆ ಬಂಡಿಯನ್ನು ನಡೆಸಲಾರದೋ, ಹಾಗೆಯೇ ಇತರರ ಸಹಾಯವಿಲ್ಲದೆ ರಾಜನು ರಾಜ್ಯವನ್ನು ಆಳಲಾರ' ಎಂದು ಹೇಳಿ ಸಹಾಯಕರನ್ನು ಅಮಾತ್ಯ, ಮಂತ್ರಿ ಎಂದೋ, ಮಂತ್ರಿಪರಿಷತ್ತಿನ ಸದಸ್ಯಎಂದೋ ನಿರ್ದೇಶಿಸುತ್ತಾನೆ. ರಾಜ್ಯದ ಅವಶ್ಯಕತೆಗೆ ತಕ್ಕಂತೆ ಅಗತ್ಯವಾದಷ್ಟು ಮಂದಿ ಪರಿಷತ್ತಿನಲ್ಲಿ ಸೇರಿಸಿಕೊಳ್ಳುವ ಸಲಹೆ ಮಾಡುತ್ತಾನೆ. ಹಿಂದಿನ ರಾಜರು ಹನ್ನೆರಡು, ಹದಿನಾರು, ಇಪ್ಪತ್ತು ಮಂದಿ ಸದಸ್ಯರನ್ನು ನೇಮಕ ಮಾಡಿಕೊಳ್ಳು ತ್ತಿದ್ದುದನ್ನು ಅವನು ಉಲ್ಲೇಖಿಸಿದ್ದಾನೆ. ಅದರ ಮೂರು-ನಾಲ್ಕು ಮಂದಿ ಇದ್ದರೆ ಸಾಕೆಂದು ತನ್ನ ಅಭಿಪ್ರಾಯವನ್ನೂ ಸೂಚಿಸುತ್ತಾನೆ. ಕಡಿಮೆ ಮಂದಿ ಅಧಿಕಾರಿಗಳಿದ್ದಷ್ಟೂ ಕೆಲಸ ಸುಲಭವಾಗಿ, ಬಿಕ್ಕಟ್ಟಿಲ್ಲದೆ, ಅಚ್ಚುಕಟ್ಟಾಗಿ ನಡೆ ದೀತೆಂದೂ, ಪ್ರಜೆಗಳಿಗೆ ಹೆಚ್ಚಿನ ಹಿತ ಕೈಗೂಡುವುದು ಬೇಗನೆ ಸಾಧ್ಯವಾದೀ ತೆಂದೂ ಅವನ ಆಶಯ.

ಆಡಳಿತದ ಬೇರೆ ಬೇರೆ ವಿಭಾಗಗಳಲ್ಲಿ ಒಬೊಬ್ಬ ಅಧೀಕ್ಷಕ ಎಂದರೆ ಮುಖ್ಯಸ್ಥ ಇರಬೇಕೆಂದೂ, ಅವನಿಗೆ ಸಹಾಯಕರಾಗಿ ಗುಮಾಸ್ತರು, ಲಿಪಿಗಾರರು, ದಾಸ್ತಾನು ನಿರ್ವಾಹಕರು, ಹೆಚ್ಚುವರಿ ಗೂಢಚಾರರು, ಮೇಲ್ವಿಚಾರಣಾಧಿಕಾರಿಗಳು, ತಾತ್ಕಾಲಿಕ ಮುಖ್ಯಸ್ಥರು ಇರಬೇಕೆಂದೂ ಕೌಟಿಲ್ಯ ಹೇಳುತ್ತಾನೆ. ಇವರೆಲ್ಲ ರಾಜ್ಯದ ಅಭ್ಯುದಯ ಒಂದನ್ನೇ ದೃಷ್ಟಿಯಲ್ಲಿರಿಸಿಕೊಂಡಿರಬೇಕೆಂದು ಅವನು ಸ್ಪಷ್ಟಪಡಿಸುತ್ತಾನೆ. ಐದು ಅಥವಾ ಹತ್ತು ಗ್ರಾಮಗಳನ್ನು ಒಟ್ಟು ಸೇರಿಸಿ ಘಟಕವೆಂದು ಕರೆದು ಅದರ ಮುಖ್ಯಸ್ಥನನ್ನಾಗಿ ಗೋಪನೆಂಬ ಅಧಿಕಾರಿಯನ್ನು ರಾಜನು ನೇಮಿಸುವುದು ಒಳ್ಳೆಯದೆಂದು ಅವನ ಸಲಹೆ. ಗೋಪನಿಗೆ ನೇರವಾಗಿ ಜನಪದವನ್ನೋ, ಘಟಕದ ನಾಲ್ಕನೆಯ ಒಂದು ಭಾಗವನ್ನೋ ನೋಡಿಕೊಳ್ಳಲು ಸ್ಥಾನಿಕರಿರುತ್ತಾರೆ. ಈ ಅಧಿಕಾರಿಗಳನ್ನು ರಾಜನೇ ನೇಮಿಸಿದರೂ ಸಂಬಳ ಪಡೆಯುವ ಅಧಿಕಾರಿಗಳ ಎಣಿಕೆಯಲ್ಲಿ ಇವರು ಸೇರುವುದಿಲ್ಲ, ಗ್ರಾಮಗಳ ಜನರೇ ಇವರನ್ನು ಆರಿಸಿಕೊಂಡು, ಅವರ ಆರ್ಥಿಕ ಆಗತ್ಯಗಳನ್ನು ಪೂರೈಸುತ್ತಾರೆ. ಘಟಕದಲ್ಲಿ ಸೇರಿದ ಒಂದೊಂದು ಗ್ರಾಮಕ್ಕೂ ಗ್ರಾಮಿಕ ಅಧಿಕಾರಿಯು ಇರುತ್ತಾನೆ. ಇವನು ಸಹ ಸಂಬಳ ಪಡೆಯುವ ಅಧಿಕಾರಿಯಲ್ಲ.

ಗ್ರಾಮರಾಜ್ಯವೆನ್ನುವ ಕಲ್ಪನೆಯೆ ಇದು. ಗ್ರಾಮದಲ್ಲಿ ಸ್ಥಳೀಯವಾದ ಸ್ವಯಮಾಡಳಿತ. ಇದರ ನಿರ್ವಹಣೆಯಲ್ಲಿ ಗ್ರಾಮೀಣ ಜನರದ್ದೇ ಮುಖ್ಯ ಪಾತ್ರ. ತಾತ್ವಿಕವಾಗಿ ಅಷ್ಟೇ ಅರಸರ ಆಡಳಿತ. ಅರಸನೇ ಇಡೀ ರಾಜ್ಯದ ಕೇಂದ್ರ; ಆದರೆ ಅವನದ್ದು ಎಲ್ಲಿಯೂ ನೇರವಾದ, ಬಲವಂತವಾದ, ಸ್ವತಂತ್ರವಾದ ಪಾತ್ರವಿರದು. ಕೌಟಿಲ್ಯನ ಅಭಿಪ್ರಾಯದಂತೆ ರಾಜನೇ ರಾಜ್ಯವಲ್ಲ, ರಾಜ್ಯದ ಒಂದು ಅಂಗ ಅಷ್ಟೇ. ಶರೀರದಲ್ಲಿ ಹೇಗೆ ಬೇರೆಬೇರೆ ಅಂಗಗಳಿದ್ದು ಒಟ್ಟಾರೆ ಶರೀರವು ಕ್ರಿಯಾಶೀಲವಾಗುವುದೋ, ಹಾಗೆಯೇ ರಾಜ್ಯದಲ್ಲಿಯೂ ರಾಜ, ಮಂತ್ರಿ, ದೇಶ, ಕೋಶ, ನ್ಯಾಯ, ಸೈನ್ಯ ಮೊದಲಾದ ಹಲವು ಅಂಗಗಳಿರುತ್ತವೆ.

ರಾಜ್ಯದ ಎಲ್ಲ ಅಂಗಗಳನ್ನೂ ಸ್ವತಂತ್ರವಾಗಿ, ಯುಕ್ತವಾಗಿ, ಸಮರ್ಥವಾಗಿ ಕೆಲಸ ಮಾಡಲುಜ್ಜುಗಿಸುವುದು ಅಷ್ಟೆ ರಾಜನ ಕೆಲಸ. ಅಂಗಗಳ ಕಾರ್ಯನಿರ್ವಹಣೆ ಅಂಗಗಳಿಗೇ ಬಿಟ್ಟದ್ದು; ಒಂದು ಅಂಗದ ಕೆಲಸದಲ್ಲಿ ಇನ್ನೊಂದು ತಲೆಹಾಕದು. ಆದರೆ ರಾಜನಾಗಲಿ, ಮಂತ್ರಿಪರಿಷತ್ತಾಗಲಿ ಅವುಗಳೆಲ್ಲದರ ಮೇಲ್ವಿಚಾರಣೆಯ ಹೊಣೆಯನ್ನು ಹೊತ್ತಿರಬೇಕು; ಅವೆಲ್ಲಕ್ಕೂ ಅಭ್ಯುದಯದ ಮಾರ್ಗದರ್ಶಿಯಾಗಿರಬೇಕು.

ಆಗಿನ ವ್ಯವಸ್ಥಿತ ಆಡಳಿತದಲ್ಲಿ ಆರ್ಥಿಕ ಸ್ವಾವಲಂಬನೆಗೆ ಹೆಚ್ಚು ಒತ್ತು

ಕೊಟ್ಟಿರುವುದಿದೆ. ಎಲ್ಲ ವೃತ್ತಿಗಳ ಮೇಲೂ, ಉದ್ಯೋಗಗಳ ಮೇಲೂ ರಾಜ್ಯದ ಹಿಡಿತ ಇರಬೇಕೆಂಬ ಕಟ್ಟುಪಾಡು ಈ ಕಾರಣಕ್ಕಾಗಿಯೇ. ಆಗಿನ ಆಡಳಿತ ಕ್ರಮದಲ್ಲಿ ನ್ಯಾಯಾಂಗ-ಕಾರ್ಯಾಂಗಗಳು ತೀರ ವಿಭಿನ್ನವಾಗಿರಲಿಲ್ಲ, ಎರಡರಲ್ಲೂ ಸ್ಥಳೀಯ ಮತ್ತು ಮಾಧ್ಯಂತರ ಘಟಕಗಳ ಪಾತ್ರ ವಿಶಿಷ್ಟವಾಗಿದ್ದಿತು. ರಾಜ್ಯದ ಮುಖ್ಯ ಉದ್ದೇಶ ಸಾಮಾಜಿಕ ವ್ಯವಸ್ಥೆಯನ್ನು ಕಾಪಿಡುವುದೇ ಆದರೂ ಅಭ್ಯುದಯದ ಆಶಯ ಅದರಲ್ಲಿ ಅಂತರ್ಗತವಾಗಿದ್ದಿತು. ಅರಸನಾದವನು ಅರ್ಥಶಾಸ್ತ್ರ ಪಾರಂಗತನಾಗಿದ್ದುಕೊಂಡು ರಾಜ್ಯದ ಸಂಪನ್ಮೂಲಗಳನ್ನು ವೃದ್ಧಿಪಡಿಸಲು ಉದ್ಯುಕ್ತನಾಗಿರಬೇಕೆಂದು ಮನು ಹೇಳುತ್ತಾನೆ. (೭,೪೨) ಅವರ ಪ್ರಕಾರ ರಾಜ್ಯವು ವ್ಯವಸಾಯಕ್ಕೆ ಹೆಚ್ಚಿನ ಗಮನ ನೀಡಬೇಕು, ಕಾಡುಗಳನ್ನು ಕಾಪಿಡಬೇಕು, ಹೆದ್ದಾರಿಗಳನ್ನು ಸರಿಯಾಗಿರಿಸಿಕೊಂಡು ಸುರಕ್ಷತೆಯನ್ನು ಉಂಟು ಮಾಡಬೇಕು, ಬಂಜರು ಭೂಮಿಯನ್ನು ಬೇಸಾಯಕ್ಕೆ ಬಳಸಿಕೊಳ್ಳುವ ಯತ್ನ ಮಾಡಬೇಕು; ಆನೆಗಳನ್ನು ಹಿಡಿದು ಪಳಗಿಸಿ ಬಳಸಿಕೊಳ್ಳಬೇಕು, ಗಣಿಗಳಿಂದ ಉತ್ಪನ್ನವನ್ನು ಹೆಚ್ಚಿಸಬೇಕು (೭, ೧೫೪)

ರಾಜ್ಯದ ಹೊಣೆಗಾರಿಕೆಯ ಪರಿಧಿಯಲ್ಲಿ ದಂಡನೀತಿ, ರಕ್ಷಣೆ, ಶಿಕ್ಷಣಗಳಷ್ಟೇ ಅಲ್ಲದೆ ಜನರ ಧರ್ಮ, ನೀತಿ, ಕುಟುಂಬ, ಆರ್ಥಿಕ ವ್ಯವಸ್ಥೆ, ಸಂಸ್ಕೃತಿ ಇವೂ ಸೇರಬೇಕೆಂದು ಹಳೆಯ ಸ್ಮೃತಿಕಾರರು ಸೂಚಿಸುತ್ತಾರೆ. ಆಡಳಿತವು ಜನರ ಇಡೀ ಜೀವನ ಕ್ಷೇತ್ರವನ್ನು ಮುಟ್ಟುತ್ತದೆಯಾಗಿ, ಜನರ ಬದುಕಿನ ಯಾವುದೇ ಭಾಗವಾಗಲಿ ಆಡಳಿತಕ್ಕೆ ಪ್ರಸಕ್ತನೇ ಆಗುತ್ತದೆ. ಹೀಗೆ ಸರ್ವಾಂಗೀಣವಾಗಿ ವ್ಯಕ್ತಿಯ ಹಿತ, ಸಮಾಜದ ಸುಸ್ಥಿತಿ ಎರಡನ್ನೂ ಸಾಧಿಸುವ ಆಡಳಿತದಲ್ಲಿ ಪ್ರಾಮಾಣಿಕರೂ ಬುದ್ಧಿವಂತರೂ ಇರಬೇಕಾದ ಅಗತ್ಯವಿದೆ.

ಆದ್ದರಿಂದಲೇ ಯುಕ್ತಾಯುಕ್ತ ವಿವೇಚನೆಯಿಲ್ಲದ, ದೂರದರ್ಶಿತ್ವವಿಲ್ಲದ, ಪೂರ್ವಾಪರ ಜ್ಞಾನವಿಲ್ಲದ, ಸ್ವಾರ್ಥಪರ ಅರಸನಿರುವುದಕ್ಕಿಂತ ರಾಜ್ಯವು ರಾಜನಿಲ್ಲದೆ ಇರುವುದೇ ಲೇಸು ಎಂದು ಸೋಮದೇವಸೂರಿ ಅಂದರು.

ಪರಮರಾಜಕಂ ಭುವನಂ ನ ತು ಮುಖೋ೯ ರಾಜಾ

ಕೌಟಿಲ್ಯನ ಅರ್ಥಶಾಸ್ತ್ರದಲ್ಲಿ ರಾಜನೆಂದರೆ ಸುಖ-ಸಂಪತ್ತಿನಲ್ಲಿ ಓಲಾಡುವ ವಿಲಾಸಿಯಲ್ಲ; ಅವನಿಗೆ ಕಠಿಣವಾದ ದಿನಚರಿಯನ್ನೇ ಈ ಗ್ರಂಥಗಳು ವಿಧಿಸಿವೆ. ಅವನದ್ದು ಅಲ್ಲಿ ಎಡೆಬಿಡದ ಕಾಯಕದ ಬದುಕು; ರಾಜ್ಯದಲ್ಲೇ ಅವನಂತೆ ದುಡಿಯುವ ಇನ್ನೊಬ್ಬ ಪ್ರಜೆಯಾಗಲೀ, ಅಧಿಕಾರಿಯಾಗಲೀ ಇರಲಾರ. ಕೌಟಿಲ್ಯನ ಅರ್ಥಶಾಸ್ತ್ರದಲ್ಲಿ ಗೂಢಚಾರರ ಪಾತ್ರ ಹೆಚ್ಚಿನದೆಂದು ಒಂದು

ಆಕ್ಷೇಪಣೆಯುಂಟು. ರಾಜ್ಯದ ಆಡಳಿತದಲ್ಲಿ ಎಲ್ಲ ಸ್ತರಗಳಲ್ಲೂ ಗೂಢಚಾರ ರನ್ನು ಅವನು ಹೇಳಿರುವುದೇನೋ ಇದೆ. ಆದರೆ ಕೌಟಿಲ್ಯನು ನೀತಿ ಸಂಹಿತೆ ಗಿಂತ ದಕ್ಷತೆಗೆ ಹೆಚ್ಚಾಗಿ ಒತ್ತು ಕೊಟ್ಟವನೆಂಬುದನ್ನು ಮರೆಯಬಾರದು. ಗೂಢಚಾರರು ಅಮಾತ್ಯರಿಂದ ಹಿಡಿದು ಎಲ್ಲ ಅಧಿಕಾರಿಗಳ ಕೃತ್ಯಾಕೃತ್ಯಗಳನ್ನೂ ಗುಟ್ಟಾಗಿ ಗುರುತಿಸಿ, ಈ ವಿವರಗಳನ್ನು ರಾಜ್ಯದ ಅರಸನ ಪ್ರಯೋಜನಕ್ಕಾಗಿ ದಾಖಲೆ ಮಾಡುವ ಹೊಣೆ ಹೊತ್ತಿದ್ದವರು. ಅಧಿಕಾರಿಗಳಿಗೆ ಈ ಭಯ ಇರದಿದ್ದರೆ ಅವರು ಸರಿಯಾಗಿ ಕೆಲಸವನ್ನು ನಿರ್ವಹಿಸಲಾರರೆಂಬ ನಂಬಿಕೆ ಕೌಟಿಲ್ಯನದು. ಅವನು ಒಂದೆಡೆ ಹೇಳಿರುವುದು ಸ್ವಾರಸ್ಯವಾಗಿದೆ. ಅಧಿಕಾರಿಯು ರಾಜ್ಯದ ಭಂಡಾರಕ್ಕೆ ಸೇರಬೇಕಾದ ಹಣದಲ್ಲಿ ಎಷ್ಟನ್ನು ನುಂಗುತ್ತಾನೆ ಎಂದು ಹೇಳುವುದು ನೀರಿನಲ್ಲಿರುವ ಮೀನು ಎಷ್ಟು ನೀರನ್ನು ನುಂಗುತ್ತದೆ ಎಂದು ಹೇಳುವಷ್ಟೇ ಕಷ್ಟ.

ರಾಜ್ಯ ಇರುವುದು ಅರಸರ, ಅಧಿಕಾರಿಗಳ ಹಿತಕ್ಕಲ್ಲ. ಅರಸರು ಮತ್ತು ಅಧಿಕಾರಿಗಳು ಇರುವುದು ಜನರ ಹಿತಕ್ಕೆ ಎಂಬ ತತ್ವವನ್ನು ಆಡಳಿತ ಮನಗಂಡರೆ ಅದು ಸುರಾಜ್ಯವೆಂಬ ಕಲ್ಪನೆ ಕೌಟಿಲ್ಯನ ಅರ್ಥಶಾಸ್ತ್ರದ್ದು. ಜನರನ್ನು ಸುಲಿದು ಅಥವಾ ವಂಚಿಸಿ ಆಡಳಿತ ನಡೆದರೆ ಅದು ಸುರಾಜ್ಯವಾಗದು. ನ್ಯಾಯಶಾಸ್ತ್ರದಲ್ಲಿ ಲಾಘವತರ್ಕ ಎಂಬುದೊಂದು ಪರಿಭಾಷೆ ಇದೆ. ಸಣ್ಣದರಿಂದಲೇ ಕೆಲಸವಾಗುವಂತಿದ್ದರೆ ದೊಡ್ಡದನ್ನು ಹಿಡಿಯಬಾರದು ಎಂದು ಅದರ ತಾತ್ಪರ್ಯ. ಸರಳವಾಗಿ ನಡೆಯಬೇಕಾದ ಕೆಲಸವನ್ನು ಸಂಕೀರ್ಣಗೊಳಿಸಬಾರದು. ಒಂದರಿಂದ ಆಗುವ ಕೆಲಸಕ್ಕೆ ಹತ್ತನ್ನು ಬಳಸಬಾರದು. ಅದು ದುಂದು ಎನಿಸಿಕೊಳ್ಳುತ್ತದೆ ಮಾತ್ರವಲ್ಲ ಅದರಿಂದ ಕೆಲಸವೂ ಕೆಟ್ಟೀತು, ನಿಧಾನವೂ ಆದೀತು. ಕೌಟಿಲ್ಯನು ಹನ್ನೆರಡು–ಹದಿನಾರು ಮಂದಿ ಇರುತ್ತಿದ್ದ ಮಂತ್ರಿಪರಿಷತ್ತಿಗಿಂತ ಎರಡು-ಮೂರು ಮಂದಿ ಮಾತ್ರ ಇರುವ ಮಂತ್ರಿಪರಿಷತ್ತಿನಲ್ಲಿ ಹೆಚ್ಚು ದಕ್ಷತೆಯನ್ನು ಕಾಣುತ್ತಾನೆ. ರಾಜನಾದವನು ನಡೆಯಬೇಕಾದ ಕೆಲಸದ ಕಡೆ ಗಮನ ನೀಡಬೇಕು. ಅಧಿಕಾರಿಗಳ ಸಂಖ್ಯೆ ಅದಕ್ಕನುಗುಣವಾಗಿರಬೇಕು. ಕೆಲಸಕ್ಕೆ ಅಧಿಕಾರಿಯೇ ವಿನಾ ಅಧಿಕಾರಿಗೆ ಕೆಲಸವೆಂಬುದು ಸರಿಯಲ್ಲ. ಪ್ರಜೆಗಳು ತಮ್ಮ ಬೆಳೆಯ ಆರನೆಯ ಭಾಗವನ್ನು ತಮ್ಮ ರಾಜನಿಗೆ ಕಾಣಿಕೆಯಾಗಿ ಸಲ್ಲಿಸುವುದು ತಮಗಾಗಿ ರಾಜ ಮಾಡಬೇಕಾದ ಕೆಲಸಕ್ಕೆ ಪ್ರತಿಫಲವಾಗಿ. ಅಧಿಕಾರಿಗಳನ್ನು ಸಾಕುವ ಸಲುವಾಗಿ ಅಲ್ಲ. ಇದನ್ನು ಅರ್ಥಶಾಸ್ತ್ರ ಸ್ಪಷ್ಟಪಡಿಸುತ್ತದೆ. ಅಧಿಕಾರಿಗಳು ಪ್ರಜೆಗಳಿಗೆ ಹೊರೆಯಾಗಬಾರದು. ಹಾಗಾದಾಗ ಅದು ಲಾಘವಯುಕ್ತಿಯೆನಿಸಿಕೊಳ್ಳುವುದಿಲ್ಲ. ಹೀಗೆ ಆಡಳಿತದ ಸಾಮರ್ಥ್ಯ ಸಂಪಾದನೆಗೆ, ಸುರಾಜ್ಯ ಸ್ಥಾಪನೆಗೆ ನಮ್ಮ ಪ್ರಾಚೀನ ಚಿಂತನೆಗಳು ಎಷ್ಟೋ ದಾರಿದೀಪವಾಗಬಲ್ಲುವು. ★

('ಸಂಯುಕ್ತ ಕರ್ನಾಟಕ' ಸಾಭಾರ)

ಭಾರತದ ನಿರ್ಮಾಣದ ಕಥೆ ಇತಿಹಾಸದ ಪುಟಗಳಿಂದ

–ಆರ್. ಸಂಪತ್

೧೮ ನೇ ಶತಮಾನದ ಮಧ್ಯಭಾಗ. ಈಸ್ಟ್ ಇಂಡಿಯಾ ಕಂಪೆನಿ ಭಾರತದಲ್ಲಿ ತನ್ನ ವ್ಯಾಪಾರವನ್ನು ನಿಲ್ಲಿಸಿ ರಾಜ್ಯಾಡಳಿತದ ಪಾತ್ರವನ್ನು ವಹಿಸಿಕೊಂಡಿತು. ೧೭೫೭ ರಲ್ಲಿ ಪ್ಲಾಸಿ ಕದನ ನಡೆಯಿತು. ಇವುಗಳ ಪರಿಣಾಮವಾಗಿ ಮೊಗಲ್ ಸಾಮ್ರಾಜ್ಯದ ಎರಡನೇ ಶಹಾ ಆಲಂ ಮತ್ತು ಅವನ ಗೆಳೆಯನಾದ ಬಂಗಾಳದ ನವಾಬ್ ಸಿರಾಜ್ ದೌಲನ ಹಣೇಬರಹ ಕೆಟ್ಟುಹೋಯಿತು. ಇದರ ಪರಿಣಾಮವಾಗಿ ಕಂಪೆನಿಯು ಇಡೀ ಉತ್ತರ ಭಾರತದ ಮೇಲೆ ತನ್ನ ಹಿಡಿತವನ್ನು ಸ್ಥಾಪಿಸಿಕೊಂಡಿತು; ದಕ್ಷಿಣ ಭಾರತದಲ್ಲಿ ಕಂಪೆನಿ ತನ್ನ ಬಲವನ್ನು ಆಗಲೇ ಪ್ರದರ್ಶಿಸಿತ್ತು.

ಕಲಕತ್ತೆಯಲ್ಲಿ ಕಂಪೆನಿಯ ಆಡಳಿತದ ಕೇಂದ್ರ ಸ್ಥಾನವಾಗಿದ್ದ ಫೋರ್ಟ್ ವಿಲಿಯಂನ್ನು ಸಿರಾಜುದ್ ಇಂಗ್ಲೀಷರ ವಿರುದ್ಧ ಹೋರಾಡಿ ಗೆದ್ದುಕೊಂಡಿದ್ದ. ದಕ್ಷಿಣ ಭಾರತದಲ್ಲಿ ಕಂಪನಿಯ ರೊಬರ್ಟ್ ಕ್ಲೈವ್ ಫ್ರೆಂಚ್‌ರನ್ನು ಸೋಲಿಸಿ ಇಂಗ್ಲೀಷರ ಪ್ರಾಬಲ್ಯವನ್ನು ಸ್ಥಾಪಿಸಿದ್ದ. ಫೋರ್ಟವಿಲಿಯಂನ್ನು ಮರಳಿ ಗೆಲ್ಲುವುದಕ್ಕಾಗಿ ರೊಬರ್ಟ ಕ್ಲೈವನನ್ನು ಕಲಕತ್ತೆಗೆ ಕಳುಹಿಸಲಾಯಿತು. ಕ್ಲೈವ್ ಈ ಕೆಲಸದಲ್ಲಿ ಯಶಸ್ವಿಯಾದ; ೧೭೬೫ ರಲ್ಲಿ ಅಲ್ಹಾಬಾದ್‌ನಲ್ಲಿ ಒಂದು ಒಪ್ಪಂದವಾಯಿತು. ಆ ಒಪ್ಪಂದದ ಪ್ರಕಾರ ಶಹಾ ಆಲಂ ಕೂಡ ಬಂಗಾಳ ಬಿಹಾರ್ ಮತ್ತು ಓರಿಸ್ಸಾ ಪ್ರದೇಶಗಳ ತನ್ನ ದಿವಾನ್‌ಗಿರಿಯನ್ನು ಕ್ಲೈವ್‌ನಿಗೆ ಬಿಟ್ಟುಕೊಟ್ಟ. ಈ ವಿಜಯದ ಕಾರಣದಿಂದಾಗಿ ಕಂಪನಿಯು ಗೆದ್ದ ಇಡೀ ಪ್ರದೇಶಕ್ಕೆ ರೊಬರ್ಟ ಕ್ಲೈವನನ್ನು ಗರ್ವನರನನ್ನಾಗಿ ಮಾಡಲಾಯಿತು.

ಇಂಗ್ಲೀಷರು ಮುಂಬೈ ಪ್ರದೇಶವನ್ನು ಪೋರ್ಚುಗೀಸರಿಂದಲೂ ಮತ್ತು ಸಿರಕಾರಪ್ರದೇಶವನ್ನು ಹೈದರಾಬಾದ್ ನಿಜಾಮನಿಂದಲೂ ಪಡೆದದ್ದರಿಂದ ಕ್ಲೈವ ಭಾರತದ ರಾಜ್ಯಾಡಳಿತದ ಪ್ರಥಮ ಮುಖ್ಯಸ್ಥನೆಂದು ನಾವು ಪರಿಗಣಿಸಬಹುದು. ೧೭೭೩ ರಲ್ಲಿ ಬ್ರಿಟಿಷ್ ಪಾರ್ಲಿಮೆಂಟ್ 'ನಿಯಂತ್ರಣ ಕಾಯ್ದೆ' (ರೆಗ್ಯುಲೇಟಿಂಗ್ ಆಕ್ಟ್) ಅಂಗೀಕರಿಸಿತು. ಆ ಮೇರೆಗೆ ಈಸ್ಟ್ ಇಂಡಿಯಾ ಕಂಪನಿ ಬ್ರಿಟಿಷ್ ಪಾರ್ಲಿಮೆಂಟ್‌ನ ನಿಯಂತ್ರಣಕ್ಕೆ ಒಳಪಟ್ಟಿತು ಮತ್ತು ಮದ್ರಾಸ್ ಹಾಗೂ ಮುಂಬೈ ಪ್ರಾಂತಗಳು ಕಲಕತ್ತೆಯಲ್ಲಿಯ ಇಂಗ್ಲೀಷರ ರಾಜಧಾನಿ ಫೋರ್ಟ ವಿಲಿಯಂ ಆಡಳಿತಕ್ಕೆ ಒಳಪಟ್ಟವು. ಆ ಕಾಯ್ದೆ ಪ್ರಕಾರ ಗವರ್ನರ್‌ನ ಸ್ಥಾನವನ್ನು ಗವರ್ನರ್-ಜನರಲ್ ಮಟ್ಟಕ್ಕೆ ಏರಿಸಲಾಯಿತು. ಆದರೆ ಕ್ಲೈವ್

೧೭೬೭ ರಲ್ಲಿಯೇ ಭಾರತವನ್ನು ಬಿಟ್ಟು ಹೋದದ್ದರಿಂದ ಅವನು ಗವರ್ನರಾಗಿ ಆಡಳಿತ ಮಾಡಿದ್ದಕ್ಕಷ್ಟೇ ತೃಪ್ತಿಪಡಬೇಕಾಯಿತು.

ಕಲಕತ್ತೆಯ ಫೋರ್ಟವಿಲಿಯಂ ಮತ್ತು ಆನಂತರ ದಿಲ್ಲಿಯ ವೈಸರಾಯರ್ ಅರಮನೆಯಲ್ಲಿ (ಅಂದರೆ ಈಗಿನ ರಾಷ್ಟ್ರಪತಿ ಭವನದಲ್ಲಿ) ಪ್ರತಿಷ್ಠಿತಗೊಂಡ ಅಧಿಕಾರಿಗಳು ಬಹಳ ಬಲಶಾಲಿಗಳಾಗಿದ್ದರು; ಅವರಲ್ಲಿ ಕೆಲವರು ನಿರಂಕುಶಮತಿಗಳಾಗಿದ್ದರು; ಇನ್ನು ಹಲವರು ಉದಾರಮತಿಗಳೂ ಆಗಿದ್ದರು. ಅವರಲ್ಲಿ ಹಲವರು ಭಾರತೀಯರ ಹಕ್ಕು ಬಾಧ್ಯತೆಗಳ ಬಗ್ಗೆ ಕಾಳಜಿ ಹೊಂದಿದವರಾಗಿದ್ದರು. ಆದರೆ ಉಳಿದವರು ಅಧೀನರಾದ ಪ್ರಜೆಗಳ ಬಗ್ಗೆ ದ್ವೇಷವನ್ನೇ ಹೊಂದಿದ್ದರು. ಬಹಳಷ್ಟು ಗವರ್ನರ್-ಜನರಲ್ಲುಗಳು ಮತ್ತು ವೈಸರಾಯುಗಳು ಆಡಳಿತ ಸುಧಾರಣಾ ಕ್ರಮಗಳನ್ನು ಜಾರಿಗೊಳಿಸಿದರು.

೧೭೮೬ ರಲ್ಲಿ ವಾರೆನ್ ಹೇಸ್ಟಿಂಗ್ಸ್ ನಿವೃತ್ತನಾದ. ಈತ ಪತ್ರಿಕಾ ಸ್ವಾತಂತ್ರ್ಯವನ್ನು ಬಯಸುತ್ತಿರಲಿಲ್ಲ. ಜೇಮ್ಸ್ ಆಗಸ್ಟಸ್‌ಹಿಕೆ ಭಾರತದ ಮೊದಲ ಪತ್ರಿಕೆಯ ಪ್ರಕಾಶಕ. ಇವನಿಗೆ ಹೇಸ್ಟಿಂಗ್ ಬಹಳ ಕಿರುಕುಳ ಕೊಟ್ಟ. ಅವನ ಸ್ಥಾನಕ್ಕೆ ಲಾರ್ಡ್ ಕಾರ್ನವಾಲಿಸ್ ಬಂದ. ಅವನು ೧೭೯೩ ರಲ್ಲಿ ನ್ಯಾಯಾಂಗವನ್ನು ಕಾರ್ಯಾಂಗದಿಂದ ಬೇರ್ಪಡಿಸಿದ. ಅವನು ಜಿಲ್ಲಾ ಮಟ್ಟದಲ್ಲಿದ್ದ ಭಾರತೀಯ ನ್ಯಾಯಾಧೀಶರನ್ನು ತೆಗೆದುಹಾಕಿ ಅವರ ಸ್ಥಳದಲ್ಲಿ ಸರ್ಕೀಟ್‌ಕೋರ್ಟ್ ಸ್ಥಾಪಿಸಿ ಅವುಗಳಿಗೆ ಇಂಗ್ಲೀಷ್ ನ್ಯಾಯಾಧೀಶರನ್ನು ನೇಮಿಸಿದ. ಚಿಕ್ಕಪುಟ್ಟ ಕೇಸುಗಳು ಮುನಸೀಫ್ ಮತ್ತು ಜಿಲ್ಲಾ ನ್ಯಾಯಾಧೀಶರ ಮುಂದೆಯೂ ಮತ್ತು ಗಂಭೀರವಾದ ಅಪರಾಧಗಳು ಪ್ರವಾಸಿ ನ್ಯಾಯಾಲಯಗಳ ಮುಂದೆಯೂ ಮಂಡಿಸಲ್ಪಟ್ಟು ಇತ್ಯರ್ಥಗೊಳ್ಳಲ್ಪಡುತ್ತಿದ್ದವು. ಗವರ್ನರ್-ಜನರಲ್‌ನ್ನು ಕ್ಷಮಾದಾನದ ಅಧಿಕಾರವನ್ನು ಪಡೆದುಕೊಂಡನು. ಅವನ ಅಧಿಕಾರಾವಧಿಯಲ್ಲೇ ಪೋಲಿಸ್ ವ್ಯವಸ್ಥೆಯೂ ಜಾರಿಗೆ ಬಂತು. ಕಂದಾಯದ ವಿಚಾರದಲ್ಲಿ ಪ್ರಾಂತ್ಯವನ್ನು ಆರ್ಥಿಕ ಘಟಕಗಳನ್ನಾಗಿ ವಿಭಜಿಸಲಾಯಿತು ಮತ್ತು ಕಲೆಕ್ಟರ್‌ಗಳ ಆಡಳಿತಕ್ಕೆ ವಹಿಸಿಕೊಡಲಾಯಿತು. ಈ ಸ್ಥಾನಗಳು ಭಾರತೀಯರಿಗೆ ಇಲ್ಲವಾದವು. ಭೂಮಿಯ ಒಡೆತನವನ್ನು ಭೂಮಿ ಉಳುವವರಿಗೆ ಕೊಡದೆ ಕಂಪನಿಗೆ ಭೂ ಕಂದಾಯ ಕೊಡಬೇಕೆಂಬ ನಿಯಮದ ಆಧಾರದ ಮೇಲೆ ಭೂ ಒಡೆತನವನ್ನು ಜಮೀನ್ದಾರರಿಗೆ ಕೊಡಲಾಯಿತು.

ಕಾರ್ನ್‌ವಾಲಿಸ್‌ನ ತರುವಾಯ ಸರ್‌ಜಾನ್ ಶೋರ್ ಐದು ವರ್ಷಗಳ ಕಾಲ ಗವರ್ನರ್-ಜನರಲ್ ಆಗಿ ಬಂದ. ನಂತರ ೧೭೯೮ ರಲ್ಲಿ ಲಾರ್ಡ್ ವೆಲೆಸ್ಲಿ ಅಧಿಕಾರ

ವಹಿಸಿಕೊಂಡ. ಈತನೇ ಬ್ರಿಟಿಶರ ಆಧಿಪತ್ಯವನ್ನು ನಿಜವಾದ ಅರ್ಥದಲ್ಲಿ ಸ್ಥಾಪಿಸಿದ, ಅವನ "ಅಧೀನ ಒಪ್ಪಂದ" ಪದ್ಧತಿಯ ಮೇರೆಗೆ ದೇಶೀ ಆಡಳಿತಗಾರರ ರಾಜ್ಯದಲ್ಲಿ ಬ್ರಿಟಿಷ್ ಸೈನ್ಯವಿಡಲು ಹಾಗೂ ಗವರ್ನರ್-ಜನರಲ್‌ನ ಪ್ರತಿನಿಧಿಯಾಗಿ ಒಬ್ಬ ನಿವಾಸಿ ಪ್ರತಿನಿಧಿಯನ್ನು ಇಡಲು ಸಾಧ್ಯವಾಯಿತು. ೧೯ ನೇ ಶತಮಾನ ಪ್ರಾರಂಭವಾಗುವ ವೇಳೆಗೆ ವೆಲೆಸ್ಲಿ ದೇಶದ ವಿವಿಧ ಭಾಗಗಳನ್ನು ಕಂಪನಿಯ ಕಪಿಮುಷ್ಟಿಗೆ ಒಳಪಡಿಸಿಕೊಂಡ. ಈತ ಪತ್ರಿಕಾ ಸೆನ್ಸರ್‌ಶಿಪ್ ಜಾರಿಗೆ ತಂದ. ಮುಂದೆ ಗವರ್ನರ್ ಜನರಲ್‌ಗಳಾಗಿ ಬಂದ ಜಾರ್ಜ್ ಬಾರ್ಲೋ ಮತ್ತು ಒಂದನೇ ಲಾರ್ಡ್ ಮಿಂಟೋ ಹೆಚ್ಚಿನ ಪ್ರಗತಿಯನ್ನೇನೂ ಸಾಧಿಸಲಿಲ್ಲ.

೧೮೧೩ ರಲ್ಲಿ ಲಾರ್ಡ್ ಹೇಸ್ಟಿಂಗ್ಸ್ ಗವರ್ನರ್ ಜನರಲ್ ಆಗಿ ಭಾರತಕ್ಕೆ ಬಂದ. ಅವನು ೧೦ ವರ್ಷಗಳ ಕಾಲ ಅಧಿಕಾರ ನಡೆಸಿದ. ಅವನು ಕೋರ್ಟ್‌ಗಳಿಗೆ ಸಂಬಂಧಿಸಿದಂಥ ಆಂತರಿಕ ವಿಷಯಗಳ ಸುಧಾರಣೆಗಳನ್ನು ತಂದ. ಬಾಕಿ ನಿಂತಿರುವ ಹಳೇ ವ್ಯಾಜ್ಯಗಳ ಪರಿಹಾರಕ್ಕಾಗಿ ಬಹಳಷ್ಟು ಮುನ್ಸೀಫರನ್ನು ನಿಯುಕ್ತಿ ಮಾಡಿದ ಮತ್ತು ಕೆಲ ವಿಶಿಷ್ಟ ವ್ಯಾಜ್ಯಗಳನ್ನು ಕುರಿತು ಮೇಲ್ಮನವಿಯ ಹಕ್ಕನ್ನು ತೆಗೆದು ಹಾಕಿದ. ಲಾರ್ಡ್ ಹೇಸ್ಟಿಂಗ್ಸ್ ಕೊಂಚ ಉದಾರವಾದಿಯಾಗಿದ್ದ. ವರ್ತಮಾನ ಪತ್ರಿಕೆಗಳ ಪ್ರಕಟಣೆಯನ್ನು ಪ್ರೋತ್ಸಾಹಿಸಿದ. ಆದರೆ ಕಂಪನಿಯ ನಿರ್ದೇಶಕರನ್ನು ಸಂತೋಷಪಡಿಸಲು ಪತ್ರಿಕಾ ನಿರ್ಬಂಧದ ಕೆಲವು ನಿಯಮಗಳನ್ನು ಹಾಗೆಯೇ ಇರಿಸಿದನಷ್ಟೇ ಅಲ್ಲ "ಕಲಕತ್ತಾ ಜರ್ನಲ್" ಎಂಬ ಪತ್ರಿಕೆಯ ಸಂಪಾದಕ ಜೇಮ್ಸ್ ಸಿಲ್ಕ್ ಬಕಿಂಗ್‌ಹ್ಯಾಮ್‌ನ ಮೇಲೆ ಖಟ್ಲೆಯನ್ನು ಹಾಕಿದ. ಹೇಸ್ಟಿಂಗ್ಸ್ ಭಾರತೀಯರಿಗೆ ಪಾಶ್ಚಿಮಾತ್ಯ ರೀತಿಯ ಶಿಕ್ಷಣ ಕೊಡಬೇಕೆಂಬ ಅಭಿಪ್ರಾಯದವನಾಗಿದ್ದ.

ನಂತರ ೧೮೨೩ರಲ್ಲಿ ಲಾರ್ಡ್ ಆಮ್‌ಹರ್ಸ್ಟ್ ಉತ್ತರಾಧಿಕಾರಿಯಾಗಿ ಬಂದ. ತನ್ನ ಐದು ವರ್ಷದ ಅಧಿಕಾರಾವಧಿಯಲ್ಲಿ ಸಾಮ್ರಾಜ್ಯವನ್ನು ವಿಸ್ತರಿಸುವುದರಲ್ಲಿ ಆಸಕ್ತನಾಗಿದ್ದ.

೧೮೨೮ ರಲ್ಲಿ ಲಾರ್ಡ್ ಬೆಂಟಿಕ್ ಗವರ್ನರ್ ಜನರಲ್ ಆಗಿ ಬಂದ. ಈತ ೧೮೩೫ರ ವರೆಗೆ ಏಳು ವರ್ಷಗಳ ಕಾಲ ಅಧಿಕಾರ ನಡೆಸಿದ. ಹಿಂದಿನ ಎಲ್ಲ ಗವರ್ನರ್ ಜನರಲ್‌ಗಳಿಗಿಂತ ಬೆಂಟಿಕ್ ಅತ್ಯುತ್ತಮ ಗವರ್ನರ್ ಜನರಲ್ ನಾಗಿದ್ದನೆಂದು ಮೆಕಾಲೆ ಹೇಳಿದ್ದಾನೆ. ಮೆಕಾಲೆ ಪ್ರಕಾರ, "ಬೆಂಟಿಕ್ ಭಾರತೀಯರ ನಿರಂಕುಶಪ್ರಭುತ್ವ ಪದ್ಧತಿಯಲ್ಲಿ ಬ್ರಿಟಿಷರ ಸ್ವಾತಂತ್ರ್ಯದ ಚೇತನವನ್ನು ತುಂಬಿದ ಮತ್ತು ಸರ್ಕಾರದ ಗುರಿ ಪ್ರಜೆಗಳ ಕಲ್ಯಾಣವೇ ಎಂಬುದನ್ನು ಆತ ಮರೆಯಲಿಲ್ಲ." ಬೆಂಟಿಕ್ ಅನೇಕ ಕ್ಷೇತ್ರಗಳಲ್ಲಿ ಬಹುಮುಖಿ ಸುಧಾರಣೆಗಳನ್ನು

ಜಾರಿಗೆ ತಂದ. ಹಿಂದೂಧರ್ಮದ ಸುಧಾರಕರೂ, ಬ್ರಹ್ಮಸಮಾಜದ ಸಂಸ್ಥಾಪಕರೂ ಆಗಿದ್ದ ರಾಜಾರಾಮ್ ಮೋಹನ್‌ರಾಯ್ ಅವರ ಒತ್ತಾಯದ ಮೇರೆಗೆ ಬೆಂಟಿಕ್ "ಸತಿ ಸಹಗಮನ" ಪದ್ಧತಿಯನ್ನು ರದ್ದುಗೊಳಿಸಿದ. ಆಡಳಿತ ಕ್ಷೇತ್ರಕ್ಕೆ ಸಂಬಂಧಿಸಿದಂತೆ "ಕಂಪನಿಯ ಕೆಲಸದಲ್ಲಿ ಕೇವಲ ಬಿಳಿಯರು ಮಾತ್ರ ಇರಬೇಕು" ಎಂಬ ಕಾರ್ನವಾಲಿಸ್‌ನ ನೀತಿಯನ್ನು ತೆಗೆದುಹಾಕಿ ಧರ್ಮ, ಜನ್ಮಸ್ಥಳ, ವರ್ಣ ಇತ್ಯಾದಿ ಯಾವುದನ್ನೂ ಗಮನಿಸದೆ ಭಾರತೀಯರಿಗೂ ಕೆಲಸವನ್ನು ಕೊಡಬೇಕು ಎಂಬ ನೀತಿಯನ್ನು ಜಾರಿಗೆ ತಂದ. ವ್ಯಾಜ್ಯಗಳನ್ನು ಕುರಿತು ಪ್ರಾದೇಶಿಕ ಭಾಷೆಗಳಲ್ಲಿ ಅರ್ಜಿ ಇತ್ಯಾದಿಗಳನ್ನು ಸಲ್ಲಿಸಲು ಅವಕಾಶ ಮಾಡಿಕೊಟ್ಟ. ಅವನ ವ್ಯಾಪಕವಾದ ಸುಧಾರಣೆ ಶಿಕ್ಷಣ ಕುರಿತಾಗಿತ್ತು. ಮೆಕಾಲೆ ಮತ್ತು ಮೋಹನ್‌ರಾಯ್‌ರ ಹಾರ್ದಿಕ ಸಮರ್ಥನೆಯೊಂದಿಗೆ ಭಾರತೀಯರಿಗೆ ಇಂಗ್ಲೀಷ್ ಶಿಕ್ಷಣವನ್ನು ಜಾರಿಗೊಳಿಸಿದ. ಕಂಪನಿಯ ಅಧಿಕಾರವನ್ನು ಒಪ್ಪಿಕೊಂಡಿದ್ದಂಥ ದೇಶೀ ಸಂಸ್ಥಾನಗಳ ವ್ಯವಹಾರಗಳಲ್ಲಿ ಹೇಸ್ಟಿಂಗ್ಸ್ ಪ್ರವೇಶ ಮಾಡುತ್ತಿರಲಿಲ್ಲ.

೧೮೩೬ ನೇ ಇಸ್ವಿಯಲ್ಲಿ ಸರ್ ಚಾರ್ಲಸ್ ಮೆಟಾಕ್ಯಾಫ್ ಕೇವಲ ಒಂದು ವರ್ಷದ ಮಟ್ಟಿಗೆ ಗವರ್ನರ್ ಜನರಲ್‌ನಾಗಿ ಬಂದ. ಆದರೆ ಅವನು ಉದಾತ್ತ ವಿಚಾರಗಳಿಗಾಗಿ ಪ್ರಸಿದ್ಧನಾದನು. ೧೮೨೩ರಲ್ಲಿ ಜಾರಿಗೆ ಬಂದಿದ್ದ ಪತ್ರಿಕಾ ನಿರ್ಬಂಧ ಕಾನೂನನ್ನು ತೆಗೆದುಹಾಕಿ ಪುನಃ ಪತ್ರಿಕಾ ಸ್ವಾತಂತ್ರ್ಯ ಬರುವಂತೆ ಮಾಡಿದ. ಆದ್ದರಿಂದಲೇ ಈತನನ್ನು ಭಾರತೀಯ ಪತ್ರಿಕಾವ್ಯವಸಾಯದ ಸ್ವಾತಂತ್ರ್ಯದಾತಾ ಎಂದು ಗುರುತಿಸಲಾಗಿದೆ.

ಲಾರ್ಡ್ ಆಕಲ್ಯಾಂಡ್ ೧೮೩೬ರಲ್ಲಿ ಗವರ್ನರ ಜನರಲ್‌ನಾಗಿ ಭಾರತಕ್ಕೆ ಆಗಮಿಸಿದ. ೧೮೪೨ರ ವರೆಗೆ ೫ ವರ್ಷಗಳ ಕಾಲ ಆಡಳಿತ ನಡೆಸಿದ. ಆದರೆ ಅಫಘಾನ ಯುದ್ಧದಲ್ಲಿ ಬ್ರಿಟಿಷರಿಗೆ ಉಂಟಾದ ಅಪಕೀರ್ತಿಯ ಕಾರಣದಿಂದಾಗಿ ಇವನು ರಾಜೀನಾಮೆ ಕೊಡಬೇಕಾಯಿತು.

ಆನಂತರ ಬಂದ ಲಾರ್ಡ ಎಲ್ಲೆನ್‌ಬರೋ ಅಫಘಾನನಲ್ಲಿ ಪುನಃ ಬ್ರಿಟಿಷರ ಗೌರವವನ್ನು ಸ್ಥಾಪಿಸಿದನಾದರೂ ಕಂಪನಿಯ ನಿರ್ದೇಶಕರ ಮಂಡಳಿಯ ಆದೇಶಗಳನ್ನು ಉಲ್ಲಂಘಿಸಿದ ಉದ್ಧಟತನಕ್ಕಾಗಿ ೧೮೪೪ರಲ್ಲಿ ರಾಜೀನಾಮೆ ಕೊಡಬೇಕಾಯಿತು.

ಆನಂತರ ಲಾರ್ಡ್ ಹಾರ್ಡಿಂಜನ ಆಗಮನವಾಯಿತು. ಅವನು ನಾಲ್ಕು ವರ್ಷಗಳ ಕಾಲ ಅಧಿಕಾರನಡೆಸಿದ. ಈತನು ಇಂಗ್ಲೀಷ್ ವಿದ್ಯಾಭ್ಯಾಸ ಮಾಡಿದ

ಭಾರತೀಯರಿಗೆ ಕಂಪನಿಯಲ್ಲಿ ಕೆಲಸ ದೊರೆಯುವಂತೆ ಮಾಡಿದ. ಅಲ್ಲದೆ ಖೋಂಡ್ ಎಂಬ ಬುಡಕಟ್ಟು ಜನಾಂಗದವರಲ್ಲಿದ್ದ ಮಾನವ ಬಲಿ ರೂಢಿಯನ್ನು ನಿಷೇಧಿಸಿದ.

ಲಾರ್ಡ್ ಡಾಲಹೌಸಿ ೧೮೪೮ ರಲ್ಲಿ ಗವರ್ನರ್ ಜನರಲ್ ಆಗಿ ಬಂದು ಫೋರ್ಟ್ ವಿಲಿಯಂನಲ್ಲಿ ಅಧಿಕಾರ ಗ್ರಹಣ ಮಾಡಿದ. ಇವನು ೮ ವರ್ಷಗಳ ಕಾಲ ಅಧಿಕಾರ ನಡೆಸಿ ಸ್ವತಃ ಇಂಗ್ಲೆಂಡಿಗಿಂತಲೂ ದೊಡ್ಡದಾದ ವಸಾಹತುವನ್ನು ಭಾರತದಲ್ಲಿ ಸ್ಥಾಪಿಸಿದ. "ಸಂತತಿ ರಾಹಿತ್ಯ ಸಿದ್ಧಾಂತ" ವನ್ನು ಜಾರಿಗೆ ತಂದ. ಈ ಸಿದ್ಧಾಂತದ ಮೇರೆಗೆ ಸಂತತಿ ಪಡೆಯದ ದೇಶೀ ರಾಜರು ಬೇರೆ ಮಕ್ಕಳನ್ನು ದತ್ತು ತೆಗೆದುಕೊಂಡು ಆ ಮಗುವನ್ನು ತಮ್ಮ ಉತ್ತರಾಧಿಕಾರಿಯನ್ನಾಗಿ ಮಾಡದೆ ತಮ್ಮ ರಾಜ್ಯವನ್ನು ಕಂಪನಿಗೆ ವಹಿಸಿಕೊಡಬೇಕಾಗಿತ್ತು. ಕಲಕತ್ತಾ, ಮದ್ರಾಸ್ ಮತ್ತು ಬೊಂಬಾಯಿಯಲ್ಲಿ ಸರ್ಕಾರದ ಆಶ್ರಯದಲ್ಲಿ ಕಾಲೇಜುಗಳನ್ನು ಪ್ರಾರಂಭಿಸಿದ ಹಾಗೂ ಜಿಲ್ಲಾ ಮಟ್ಟದಲ್ಲಿ ಇಂಗ್ಲೀಷ್ ಹಾಗೂ ಪ್ರಾದೇಶಿಕ ಶಾಲೆಗಳನ್ನು ಸ್ಥಾಪಿಸಿದ ನಷ್ಟೇ ಅಲ್ಲ ಖಾಸಗಿ ಶಿಕ್ಷಣ ಸಂಸ್ಥೆಗಳ ಸ್ಥಾಪನೆಗೆ ಪ್ರೋತ್ಸಾಹವನ್ನು ಕೊಟ್ಟ. ಅಲ್ಲದೆ, ಡಾಲಹೌಸಿ ಭಾರತದಲ್ಲಿ ರೈಲು ಸಂಚಾರ, ಅಂಚೆ ಮತ್ತು ತಂತಿ ವ್ಯವಸ್ಥೆಯನ್ನು ಪ್ರಾರಂಭಿಸಿದ. ೧೮೫೨ರಲ್ಲಿ ಮೊಟ್ಟಮೊದಲ ಬಾರಿಗೆ ಬೊಂಬೆ ಮತ್ತು ಥಾಣೆ ನಡುವೆ ರೈಲು ಸಂಚಾರ ಪ್ರಾರಂಭವಾಯಿತು; ಸುಮಾರು ೬,೫೦೦ ಕಿಲೋ ಮೀಟರ್ ವ್ಯಾಪ್ತಿಯ ಎಲೆಕ್ಟ್ರಿಕ ಟೆಲಿಗ್ರಾಫ್ ಜಾಲವನ್ನು ಸೃಷ್ಟಿಸಿದ. ೧೮೫೪ರಲ್ಲಿ ಪೋಸ್ಟ್ ಆಫೀಸ್ ಕಾನೂನನ್ನು ಜಾರಿಗೆ ತಂದು ಅಂಚೆಚೀಟಿಗಳ ಮೂಲಕ ಒಂದೇ ಪ್ರಕಾರದ ಅಂಚೆದರವನ್ನು ಜಾರಿಗೆ ತಂದ. ದೇಶದಲ್ಲಿಯ ಬ್ರಿಟಿಷ್ ಉತ್ಪಾದಕರ ಅನುಕೂಲಕ್ಕಾಗಿ ಮುಂಬೈ, ಕರಾಚಿ ಮತ್ತು ಕಲಕತ್ತಾ ಬಂದರುಗಳ ಅಭಿವೃದ್ಧಿ ಕಾರ್ಯವನ್ನು ಕೈಗೊಂಡ.

ಲಾರ್ಡ್ ಕ್ಯಾನಿಂಗ್ ೧೮೫೬ ರಲ್ಲಿ ಗವರ್ನರ್ ಜನರಲ್ ಆಗಿ ಬಂದ. ಈತನ ಅವಧಿಯಲ್ಲಿಯೇ "ಸಂತತಿ ರಾಹಿತ್ಯ" ಸಿದ್ಧಾಂತವನ್ನು ಪ್ರತಿಭಟಿಸಿ ದೇಶೀ ಸಂಸ್ಥಾನಗಳು ೧೮೫೭ ರಲ್ಲಿ ಈಸ್ಟ್ ಇಂಡಿಯಾ ಕಂಪನಿಯ ವಿರುದ್ಧ ಬಂಡೆದ್ದವು. ಇದನ್ನೇ ಇಂಗ್ಲೀಷರು ತುಚ್ಛವಾಗಿ "ಸಿಪಾಯಿದಂಗೆ" ಎಂದು ಕರೆದರು. ಇಂಗ್ಲೀಷರು ತಮ್ಮ ಶಕ್ತಿಯನ್ನೆಲ್ಲ ಉಪಯೋಗಿಸಿ ಅದನ್ನು ದಮನಗೊಳಿಸಿದರಾದರೂ ಇಂಗ್ಲೆಂಡಿನ ಮಹಾರಾಣಿ ವಿಕ್ಟೋರಿಯಾ ೧೮೫೮ರಲ್ಲಿ ಒಂದು ಮಹಾಘೋಷಣೆಯನ್ನು ಹೊರಡಿಸಿ ಭಾರತದಲ್ಲಿ ಈಸ್ಟ್ ಇಂಡಿಯಾ ಕಂಪನಿಯ ಆಡಳಿತವನ್ನು ಕೊನೆಗೊಳಿಸಿ ನೇರವಾಗಿ ಇಂಗ್ಲೆಂಡ್ ಸರ್ಕಾರದ

ಆಡಳಿತಕ್ಕೆ ವಹಿಸಿಕೊಂಡಳು. ಲಾರ್ಡ್ ಕ್ಯಾನಿಂಗನೇ ಹೊಸ ಆಡಳಿತದ ಮೊದಲ ವೈಸರಾಯನಾಗಿ ನಿಯುಕ್ತಗೊಂಡ. ೧೮೬೧ರಲ್ಲಿ ಇಂಡಿಯಾ ಕೌನ್ಸಿಲ್ಸ್ ಕಾನೂನು ಜಾರಿಗೆ ಬಂತು. ಈ ಕಾನೂನಿನ ಮೇರೆಗೆ ಬ್ರಿಟಿಷರ ಆಡಳಿತದಲ್ಲಿಯ ಪ್ರದೇಶಗಳಲ್ಲಿ ಶಾಸನಸಭೆಗಳು ಜಾರಿಗೆ ಬಂದವು ಮತ್ತು ವೈಸರಾಯರ ಕೌನ್ಸಿಲ್‌ನ್ನು ವಿಸ್ತರಿಸಲಾಯಿತು. "ಸಂತತಿ ಸಾಹಿತ್ಯ ಸಿದ್ಧಾಂತವನ್ನು" ಕ್ಯಾನಿಂಗ್ ರದ್ದುಪಡಿಸಿದ. ಇಂಡಿಯನ್ ಪೀನಲ್ ಕೋಡ್, ಕ್ರಿಮಿನಲ್ ಪ್ರೊಸಿಜರ್ ಕೋಡ್ ಮತ್ತು ಇಂಡಿಯನ್ ಹೈಕೋರ್ಟ್ಸ್ ಕಾನೂನುಗಳು ಸಹ ಜಾರಿಗೆ ಬಂದವು.

ನಂತರದ ವೈಸರಾಯ್ ಲಾರ್ಡ್ ಎಲ್ಜಿನ್. ಈತನ ಅವಧಿ ಚಿಕ್ಕದಾಗಿತ್ತು. ಈತನು ತನ್ನ ಆಡಳಿತಾವಧಿಯಲ್ಲಿ ಚಿಕ್ಕಚಿಕ್ಕ ಕೋರ್ಟ್‌ಗಳನ್ನು ಸೇರಿಸಿ ಮೂರು ಪ್ರದೇಶಗಳಲ್ಲಿ ಹೈಕೋರ್ಟ್‌ಗಳನ್ನು ಸ್ಥಾಪಿಸಿದ.

೧೮೬೪ ರಲ್ಲಿ ಸರ್ ಜಾನ್ ಲಾರೆನ್ಸ್ ವೈಸರಾಯನಾದ, ಈತನು ಪಂಜಾಬ್ ಮತ್ತು ಔಧ್ ರಾಜ್ಯಗಳಲ್ಲಿ ಭೂಹಿಡುವಳಿಗೆ ಸಂಬಂಧಿಸಿದ ಸುಧಾರಣೆಯನ್ನು ಜಾರಿ ಮಾಡಿದ.

೧೮೬೯ ರಲ್ಲಿ ಲಾರ್ಡ್ ಮೇಯೋ ವೈಸರಾಯನಾಗಿ ಬಂದ; ಇವನು ಆರ್ಥಿಕ ವ್ಯವಹಾರದ ವಿಕೇಂದ್ರೀಕರಣ ಮಾಡಿದ. ಅಲ್ಲದೆ, ಇನ್ನೂ ಹೆಚ್ಚು ಕಾಲೇಜುಗಳನ್ನು ಸ್ಥಾಪಿಸಲು ಪ್ರೋತ್ಸಾಹಿಸಿದ. ಇವನು ಅಂಡಮಾನ್ ದ್ವೀಪಕ್ಕೆ ಭೇಟಿಗೆ ಹೋದಾಗ ಅಲ್ಲಿಯ ಒಬ್ಬ ಖೈದಿಯು ಇವನನ್ನು ಕೊಲೆ ಮಾಡಿದ.

ನಂತರ ಲಾರ್ಡ್ ನಾರ್ಥ್‌ಬ್ರೂಕ್ ಬಂದ. ಈತನು ಐದು ವರ್ಷ ಆಡಳಿತ ನಡೆಸಿದ.

೧೮೭೬ ರಲ್ಲಿ ಲಾರ್ಡ್ ಲಿಟ್ಟನ್ ಆಗಮಿಸಿದ. ಈ ಹೊತ್ತಿಗೆ ಭಾರತದಲ್ಲಿ ಪ್ರಾದೇಶಿಕ ಭಾಷೆಗಳಲ್ಲಿ ಅನೇಕ ಪತ್ರಿಕೆಗಳು ಹುಟ್ಟಿಕೊಂಡಿದ್ದವು. ಅವು ವಿದೇಶಿಯರ ದುರಾಡಳಿತವನ್ನು ಬಹಿರಂಗಗೊಳಿಸುತ್ತಿದ್ದವು. ಆದ್ದರಿಂದ ಲಿಟ್ಟನ್ ೧೮೭೮ ರಲ್ಲಿ ಪ್ರಾದೇಶಿಕ ಮುದ್ರಣ ಶಾಸನವನ್ನು ಜಾರಿಗೆ ತಂದ. ಸರಕಾರದ ವಿರುದ್ಧ ಬರೆಯುವ ಪತ್ರಿಕೆಗಳ ಮೇಲೆ ಕಠಿಣ ಕ್ರಮವನ್ನು ಜರುಗಿಸಿದ. ೧೮೫೩ ರಲ್ಲಿ ಜಾರಿಗೆ ಬಂದಿದ್ದ ಚಾರ್ಟರ್ ಏಕ್ಟ್ ಪ್ರಕಾರ ಸರಕಾರಿ ಸೇವೆಯಲ್ಲಿ ಸೇರಲು ಇದ್ದ ೨೧ ನೇ ವಯಸ್ಸನ್ನು ೧೯ ನೇ ವರ್ಷಕ್ಕೆ ಇಳಿಸಿದ. ಈ ಕ್ರಮದ ಹಿಂದೆ ಇದ್ದ ಉದ್ದೇಶ್ಯ ಭಾರತೀಯರಿಗೆ ಆಡಳಿತಾತ್ಮಕ ಹಕ್ಕುಗಳು ದೊರೆಯಬಾರದೆಂಬುದೇ ಆಗಿತ್ತು.

ಇಷ್ಟರಲ್ಲಿ ಇಂಗ್ಲೆಂಡಿನಲ್ಲಿ ಚುನಾವಣೆ ನಡೆದು ಲಿಬರಲ್ ಪಕ್ಷದ ಗ್ಲ್ಯಾಡ್‌ಸ್ಟೋನ್ ಪ್ರಧಾನಮಂತ್ರಿಯಾದ.

೧೮೮೦ ರಲ್ಲಿ ಲಾರ್ಡ್ ರಿಪ್ಪನನ್ನು ವೈಸರಾಯನನ್ನಾಗಿ ಕಳುಹಿಸಿದರು. ಇವನು ಎಲ್ಲ ವೈಸರಾಯರಿಗಿಂತ ಅತ್ಯಂತ ಹೆಚ್ಚು ಉದಾರಿಯಾಗಿದ್ದ. ಅವನು ಭಾಷಾ ಪತ್ರಿಕೆಗಳ ಮೇಲಿನ ನಿರ್ಬಂಧದ ಕಾನೂನನ್ನು ತೆಗೆದು ಹಾಕಿದ. ಸ್ಥಳೀಯ ಆಡಳಿತ ಮಂಡಳಿಗಳ ರಚನೆಗೆ ಸಹಾಯವಾಗುವಂಥ ಕಾನೂನನ್ನು ಜಾರಿಗೆ ತಂದ, ಈ ಮಂಡಳಿಗಳು ಆಡಳಿತದ ವಿಷಯದಲ್ಲಿ ಭಾರತೀಯರಿಗೆ ಶಿಕ್ಷಣ ಕೊಟ್ಟವೆಂದರೆ ತಪ್ಪಾಗಲಾರದು. ೧೮೮೧ ರಲ್ಲಿ ಫ್ಯಾಕ್ಟರಿ ಏಕ್ಟ್ ಜಾರಿಗೆ ತಂದು ಕಾರ್ಮಿಕರ ಹಕ್ಕುಗಳ ಸಂರಕ್ಷಣೆಯನ್ನು ಮಾಡಿದ; ಪ್ರಾಥಮಿಕ ಶಿಕ್ಷಣವನ್ನು ಸ್ಥಳೀಯ ಆಡಳಿತ ಮಂಡಳಿಗಳಿಗೆ ವಹಿಸಿಕೊಟ್ಟ. ಸರ್ಕಾರದ ಆದಾಯವನ್ನು ರಾಷ್ಟ್ರೀಯ, ಪ್ರಾದೇಶಿಕ ಮತ್ತು ಸ್ಥಾನೀಯ ಎಂಬುದಾಗಿ ಮೂರು ವಿಭಾಗಗಳಲ್ಲಿ ವಿಂಗಡಿಸಿದ. ಲಾರ್ಡ್ ರಿಪ್ಪನ್ ಆಡಳಿತದ ಅವಧಿ ನಾಲ್ಕು ವರ್ಷ ಮಾತ್ರ ಇತ್ತು.

೧೮೮೪ ರಿಂದ ೧೮೮೮ ರ ವರೆಗೆ ವೈಸರಾಯನಾಗಿ ಲಾರ್ಡ್ ಢಫರಿನ್ ಬಂದ. ಈತನ ಕಾಲಾವಧಿಯಲ್ಲಿಯೇ ೧೮೮೫ ರಲ್ಲಿ ಆಲನ್ ಆಕ್ಟೋವಿಯನ್ ಹ್ಯೂಮ್, ವಿಲಿಯಂ ವೆಡರ್ಬರ್ನ್, ದಾದಾಭಾಯಿ ನೌರೋಜಿ ಅವರ ಪ್ರಯತ್ನದ ಫಲವಾಗಿ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನ ಸ್ಥಾಪನೆಯಾಯಿತು. ಇದು ಒಂದು ಮಹತ್ವದ ರಾಜಕೀಯ ಬೆಳವಣಿಗೆ. ಕಾಂಗ್ರೆಸ್‌ನ ಮೊದಲ ಅಧಿವೇಶನಕ್ಕೆ ಡಬ್ಲ್ಯು. ಸಿ. ಬೆನರ್ಜಿ ಅಧ್ಯಕ್ಷರಾಗಿದ್ದರು.

ಆನಂತರ ಲ್ಯಾಂಡ್ಸ್‌ಡೌನ್ ಅಧಿಕಾರಕ್ಕೆ ಬಂದ. ಈತನು ೧೮೮೮ ರಿಂದ ೧೮೯೪ ರ ವರೆಗೆ ಅಧಿಕಾರದಲ್ಲಿದ್ದ. ಇವನ ೧೮೯೨ ರಲ್ಲಿ ಇಂಡಿಯನ್ ಏಕ್ಟ್ ಜಾರಿಗೆ ತಂದು ದೇಶದ ಸಂವಿಧಾನಾತ್ಮಕ ಇತಿಹಾಸದಲ್ಲಿ ಬಹಳ ಮಹತ್ವದ ಹೆಜ್ಜೆಯನ್ನಿಟ್ಟ. ಈ ಕಾನೂನಿನ ಮೇರೆಗೆ ಪ್ರಾದೇಶಿಕ ಶಾಸಕಾಂಗಗಳು ಪಾರ್ಲಿಮೆಂಟ್ ರೀತಿಯಲ್ಲಿ ಕೆಲಸ ಮಾಡಲು ಪ್ರಾರಂಭಿಸಿವು. ಆ ಕಾರಣದಿಂದಾಗಿ ಗೋಪಾಲ ಕೃಷ್ಣ ಗೋಖಲೆ, ಅಶುತೋಷ ಮುಖರ್ಜಿ ಮತ್ತು ಸುರೇಂದ್ರನಾಥ ಬೆನರ್ಜಿ ಮುಂತಾದ ರಾಜಕೀಯ ಮುತ್ಸದ್ದಿಗಳು ಆ ಶಾಸನ ಸಭೆಗಳಿಗೆ ಆಕರ್ಷಿತರಾದರು. ಆ ಶಾಸನಸಭೆಗಳು ಕಾಂಗ್ರೆಸ್ಸಿನ ಮಹತ್ವಾಕಾಂಕ್ಷೆಗಳನ್ನು ಈಡೇರಿಸದಿದ್ದರೂ ಅವು ಒಂದು ಒಳ್ಳೆಯ ಉಪಕ್ರಮವೆಂದು ಭಾವಿಸಲಾಯಿತು.

೧೮೯೪ ಕ್ಕೆ ಎರಡನೇ ಎಲ್ಜಿನ್ ವೈಸರಾಯನಾಗಿ ಆಗಮಿಸಿದ. ಈತನ ಕಾಲದಲ್ಲಿ ದೇಶದ ಬಹುಭಾಗದಲ್ಲಿ ಭಯಂಕರವಾದ ಕ್ಷಾಮ ತಲೆದೋರಿತು.

ಲಾರ್ಡ್ ಕರ್ಜನ್ ಬಂದ ಕೂಡಲೇ "ಬರಗಾಲ ಸಮಿತಿ"ಯನ್ನು ಗೊತ್ತು ಮಾಡಿ ಕ್ಷಾಮದ ಕಾರಣಗಳನ್ನು ಪರಿಶೀಲಿಸುವಂತೆ ಮಾಡಿದ. ಇವನು ಅಧಿಕಾರಕ್ಕೆ

ಬಂದ ಸಮಯದಲ್ಲಿ ಪ್ಲೇಗ್ ಸಹ ಹರಡಿತ್ತು. ಈ ಎರಡು ಪ್ರಾಕೃತಿಕ ವಿಕೋಪಗಳಿಂದ ಜನರು ರೊಚ್ಚಿಗೆದ್ದರು. ಕರ್ಜನ್ ಬಗ್ಗೆ ಜನರಲ್ಲಿ ದ್ವೇಷ ಉಂಟಾಯಿತು. ಇವನು ಮಾಡಿದ ಅತ್ಯಂತ ದೊಡ್ಡ ತಪ್ಪೇನೆಂದರೆ ಧರ್ಮದ ಆಧಾರದ ಮೇಲೆ ಬಂಗಾಳದ ವಿಭಜನೆ ಮಾಡಿದ್ದು. ೧೯೧೧ ರಲ್ಲಿ ಈ ತಪ್ಪನ್ನು ಸರಿಪಡಿಸಲಾಯಿತಾದರೂ ಈ ಕುಚೇಷ್ಟೆಯು ಕಾರಣದಿಂದ ಮುಂದೆ ದೇಶ ಇಬ್ಭಾಗವಾಯಿತು. ಬಂಗಾಳ ವಿಭಜನೆಗೆ ವಿರೋಧವಾಗಿ ದೇಶದಾದ್ಯಂತ ಚಳುವಳಿ ನಡೆಯಿತು, ಜೊತೆಗೆ ವಿದೇಶಿ ಪದಾರ್ಥಗಳ ಬಹಿಷ್ಕಾರ ಚಳುವಳಿಯೂ ನಡೆಯಿತು. ಆದರೆ ಕರ್ಜನ್ ಕೆಲ ಒಳ್ಳೆಯ ಕೆಲಸಗಳನ್ನೂ ಮಾಡಿದ. ಪೋಲೀಸ್ ಇಲಾಖೆಯನ್ನು ಪುನರ್ರಚಿಸಿದ; ಆಧುನಿಕ ಕೃಷಿ ತಾಂತ್ರಿಕತೆಯನ್ನು ಪ್ರಚಾರ ಮಾಡುವುದರ ಮೂಲಕ ಮತ್ತು ವ್ಯವಸಾಯ ಇಲಾಖೆಯನ್ನು ಸ್ಥಾಪಿಸುವುದರ ಮೂಲಕ ಪ್ರಾಚೀನ ಸ್ಮಾರಕಗಳ ರಕ್ಷಣೆಗೆ ಕ್ರಮ ಕೈಗೊಂಡ.

ಕರ್ಜನ್‌ನ ಕೆಲವು ದುಷ್ಕೃತ್ಯಗಳ ಪರಿಣಾಮವನ್ನು ಮುಂದೆ ವೈಸರಾಯ್ ಆಗಿ ಬಂದ ಲಾರ್ಡ್ ಮಿಂಟೋ ಎದುರಿಸಬೇಕಾಯಿತು. ಈತನ ಆಡಳಿತ ೧೯೦೫ ರಿಂದ ೧೯೧೦. ಕಾಂಗ್ರೆಸ್ ನಾಯಕರ ಸಾರ್ವಜನಿಕ ಸಭೆಗಳ ಮೇಲೆ ಪ್ರತಿಬಂಧಕ ಆಜ್ಞೆಗಳನ್ನು ಜಾರಿ ಮಾಡಿದ. ಪತ್ರಿಕಾ ಕಾನೂನು, ಸ್ಫೋಟಕ ವಸ್ತುಗಳ ಕಾನೂನು ಮುಂತಾದವುಗಳನ್ನು ಜಾರಿ ಮಾಡಿದುದಲ್ಲದೆ, ರಾಷ್ಟ್ರೀಯ ಚಳುವಳಿಯನ್ನು ದಮನ ಮಾಡಲು ಪ್ರಯತ್ನಿಸಿದ. ಲಾಲಾ ಲಜಪತರಾಯ್, ಬಾಲಗಂಗಾಧರ್ ತಿಲಕ್ ಮತ್ತು ಬಿಪಿನ್‌ಚಂದ್ರ ಪಾಲರನ್ನು ಅವರ ಬ್ರಿಟಿಷ್ ವಿರೋಧಿ ಭಾಷಣ ಮತ್ತು ಬರಹಗಳಿಗಾಗಿ ದೇಶಾಂತರಕ್ಕೆ ಕಳುಹಿಸಿದ. ೧೯೦೭ ರಲ್ಲಿ ಸೂರತ್ ಅಧಿವೇಶನದಲ್ಲಿ ಕಾಂಗ್ರೆಸ್ ಮಿತವಾದಿ ಮತ್ತು ಉಗ್ರವಾದಿಗಳೆಂದು ಎರಡು ಭಾಗವಾಯಿತು. ಮಿ ತ ವಾ ದಿ ಗ ಳು ಸರಕಾರದಿಂದ ಕ್ಷಮಾಯಾಚಿಸುವಂಥವರಾದರು. ಭಾರತೀಯರ ಆಶೆಯನ್ನು ತಣಿಸುವುದಕ್ಕಾಗಿ ವೈಸರಾಯ್ ಕಾರ್ಯಕಾರಿ ಮಂಡಳಿಗೆ ಓರ್ವ ಭಾರತೀಯನನ್ನು ಆಯ್ಕೆ ಮಾಡಿಕೊಳ್ಳಲಾಯಿತು. ೧೯೦೯ ರಲ್ಲಿ ಮಿಂಟೋ-ಮೋರಲೆ ಸುಧಾರಣೆಗಳನ್ನು ಜಾರಿಗೆ ತರಲಾಯಿತು.

೧೯೧೦ ರಲ್ಲಿ ಲಾರ್ಡ್ ಹಾರ್ಡಿಂಜ್ ವೈಸರಾಯನಾಗಿ ಬಂದ. ಈತನೇ ಬಂಗಾಳದ ವಿಭಜನೆಯನ್ನು ರದ್ದುಗೊಳಿಸಿದ. ೧೯೧೧ ರಲ್ಲಿ ಸರ್ಕಾರದ ಕೇಂದ್ರ ಸ್ಥಾನವನ್ನು ಕಲಕತ್ತೆಯಿಂದ ಹೊಸದಿಲ್ಲಿಗೆ ಸ್ಥಳಾಂತರಿಸಿದ, ಈತನ ಆರು ವರ್ಷಗಳ ಆಡಳಿತ ಎರಡು ಪ್ರಮುಖ ಘಟನೆಗಳಿಗಾಗಿ ಮಹತ್ವ ಪಡೆದಿದೆ. ೧೯೧೪ ರಲ್ಲಿ ಮೊದಲನೇ ಮಹಾಯುದ್ಧ ಪ್ರಾರಂಭವಾಯಿತು ಮತ್ತು ಇಂಗ್ಲೀಷ್

ಸರ್ಕಾರ ಭಾರತೀಯ ಸೈನಿಕರನ್ನು ಈ ಯುದ್ಧಕ್ಕೆ ಎಳೆದೊಯ್ಯಿತು. ಇನ್ನೊಂದು ಘಟನೆ ದಕ್ಷಿಣ ಆಫ್ರಿಕಾದಿಂದ ಎಂ. ಕೆ. ಗಾಂಧಿಯವರ ಆಗಮನ ಹಾಗೂ ತಿಲಕ ರಿಂದ ನೇತೃತ್ವದ ಹಸ್ತಾಂತರ ಮತ್ತು ಆನಿ ಬೆಸೆಂಟ್ ಅವರಿಂದ ೧೯೧೧ ರಲ್ಲಿ ಹೋಂ ರೂಲ್ ಲೀಗ್ ಸ್ಥಾಪನೆ.

೧೯೧೬ ಕ್ಕೆ ಲಾರ್ಡ ಚೆಮ್ಸ್‌ಫೋರ್ಡ್ ಬಂದ. ಈತನು ೧೯೨೧ ರ ವರೆಗೆ ಆಡಳಿತ ನಡೆಸಿದ. ೧೯೧೯ ರಲ್ಲಿ ಮೊಂಟೆಗೋ-ಚೆಮ್ಸ್‌ಫೋರ್ಡ ಸುಧಾರಣೆಯನ್ನು ಜಾರಿಗೆ ತಂದ. ಈ ಸುಧಾರಣೆಗಳ ಕಾರಣದಿಂದ ಪ್ರಾಂತ ಗಳಲ್ಲಿ ದ್ವಿಮುಖ ಆಡಳಿತ ಜಾರಿಗೆ ಬಂತು. ಮೊಟ್ಟಮೊದಲನೆಯ ಬಾರಿಗೆ ಸರ್ ಎಸ್.ಪಿ. ಸಿಂಹರವರು ಬಿಹಾರದ ಗವರ್ನರ್ ಆಗಿ ನಿಯುಕ್ತಿಗೊಂಡರು. ಈ ಅವಧಿಯಲ್ಲಿಯೇ ಮೊದಲನೇ ಮಹಾಯುದ್ಧ ಮುಗಿಯಿತು ಮತ್ತು ರೌಲೆಟ್ ಎಕ್ಟ್ ಜಾರಿಗೆ ಬಂದಿತು. ಈ ಕಾನೂನು ದಬ್ಬಾಳಿಕೆಯ ಕಾನೂನಾಗಿತ್ತು. ಗಾಂಧೀ ಇದನ್ನು "ಅರಾಜಕತೆಯನ್ನುಂಟು ಮಾಡುವ ಕಾನೂನು" ಎಂದು ಕರೆದರು. ೧೯೧೯ ರಲ್ಲಿ ಜಲಿಯಾನವಾಲಾ ಬಾಗ್ ಹತ್ಯಾಕಾಂಡ ನಡೆದು ಇಡೀ ದೇಶದ ಭಾವನೆಯನ್ನೇ ಕೆರಳಿಸಿತು. ರೌಲೆಟ್ ಕಾನೂನು ವಿರುದ್ಧ ಗಾಂಧೀ ಅಸಹಕಾರ ಚಳುವಳಿಯನ್ನು ಪ್ರಾರಂಭಿಸಿದರು.

೧೯೨೨ ನೇ ಇಸ್ವಿಗೆ ಲಾರ್ಡ್ ರೀಡಿಂಗ್ ವೈಸರಾಯನಾಗಿ ಬಂದ. ಈತನ ಕಾಲದಲ್ಲಿ ಅಸಹಕಾರ ಚಳುವಳಿ ಬಹಳ ಏರಿಕೆಯನ್ನು ಕಂಡಿತು. ಆದರೆ ಬಿಹಾರ್‌ದ ಚೌರಿಚಾರಾ ಎಂಬಲ್ಲಿ ನಡೆದ ದುರ್ಘಟನೆಯ ಕಾರಣದಿಂದಾಗಿ ಗಾಂಧೀಜಿ ಆ ಚಳುವಳಿಯನ್ನು ಹಿಂದಕ್ಕೆ ತೆಗೆದುಕೊಂಡರು. ೧೯೨೧ ರಲ್ಲಿ ಪ್ರಿನ್ಸ್ ಆಫ್ ವೇಲ್ಸ್ ಭೇಟಿಕೊಟ್ಟರು. ಆ ಭೇಟಿಯನ್ನು ವಿರೋಧಿಸಿ ಇಡೀ ದೇಶ ಹರತಾಳವನ್ನು ಆಚರಿಸಿತು. ಈ ಎರಡು ಘಟನೆಗಳು ದೇಶದಲ್ಲಿ ಉಂಟುಮಾಡಿದ ಜನಜಾಗೃತಿಯಿಂದ ಬ್ರಿಟಿಷ್ ಸರ್ಕಾರ ಗಾಬರಿಗೊಂಡಿತು. ಆಗ ಕೆಲವು ಸುಧಾರಣಾ ಕ್ರಮಗಳನ್ನು ಕೈಗೊಂಡಿತು. ಅವುಗಳಲ್ಲಿ ಮುಖ್ಯ ವಾದವು ರೌಲೆಟ್ ಎಕ್ಟನ್ನು ರದ್ದುಗೊಳಿಸಿದ್ದು; ೧೯೧೦ ರ ಪತ್ರಿಕಾ ನಿರ್ಬಂಧ ಕಾನೂನು ರದ್ದು ಪಡಿಸಿದ್ದು ಮತ್ತು ನಾಗರಿಕ ಸೇವೆಯಲ್ಲಿ ಯುರೋಪಿ ಯನ್ನರಿಗೂ ಮತ್ತು ಭಾರತೀಯರಿಗೂ ಸಮಾನ ಅವಕಾಶ ಕಲ್ಪಿಸಿದ್ದು.

೧೯೨೬ ರಿಂದ ೧೯೩೧ ರ ವರೆಗೆ ಲಾರ್ಡ ಇರ್ವಿನ್ ವೈಸರಾಯನಾದ. ಭಾರತಕ್ಕೆ "ಅಧೀನ ಆಧಿಪತ್ಯ" (ಡೊಮಿನಿಯನ್ ಸ್ಟೇಟಸ್) ಕೊಡುವ ಉದ್ದೇಶ್ಯಕ್ಕಾಗಿ ೧೯೨೮ ರಲ್ಲಿ ಸೈಮನ್ ಕಮೀಶನ್ ಗೊತ್ತು ಮಾಡಲಾಯಿತು. ಆದರೆ ಈ ಆಯೋಗದಲ್ಲಿ ಯಾವುದೇ ಭಾರತೀಯನು ಸದಸ್ಯನಾಗಿ ಇಲ್ಲದ್ದರಿಂದ

ಆ ಸಲಹೆಯನ್ನು ಕಾಂಗ್ರೆಸ್ ನಿರಾಕರಿಸಿತು ಮತ್ತು "ಸೈಮನ್ ವಾಪಸ್ ಹೋಗಿ" ಎಂಬ ಪ್ರತಿಭಟನೆಯನ್ನು ಆಯೋಜಿಸಿತು. ೧೯೩೦ರಲ್ಲಿ ಲಾಹೋರ್‌ನಲ್ಲಿ ನಡೆದ ಕಾಂಗ್ರೆಸ್ ಅಧಿವೇಶನದಲ್ಲಿ "ಪೂರ್ಣ ಸ್ವರಾಜ್ಯ"ದ ನಿರ್ಣಯವನ್ನು ಕೈಗೊಳ್ಳಲಾಯಿತು. ಇದರ ಜೊತೆಯೇ ಸವಿನಯ ಕಾನೂನುಭಂಗ ಚಳುವಳಿಯನ್ನೂ ಹೂಡಲಾಯಿತು ಸಾಮಾನ್ಯ ಉಪ್ಪಿನ ಮೇಲಿನ ತೆರಿಗೆಯನ್ನು ವಿರೋಧಿಸಲು "ಉಪ್ಪಿನ ಸತ್ಯಾಗ್ರಹ" ವನ್ನೂ ಪ್ರಾರಂಭಿಸಲಾಯಿತು. ಸರ್ಕಾರದ ಕಠೋರ ಕ್ರಮಗಳ ನಂತರವೂ ಚಳುವಳಿಗಳು ಯಶಸ್ವಿಯಾದವು. ಅದೇ ವರ್ಷ ಸೈಮನ್ ವರದಿಯನ್ನು ಚರ್ಚಿಸಲು ಲಂಡನ್ನಿನಲ್ಲಿ ದುಂಡು ಮೇಜಿನ ಪರಿಷತ್ತನ್ನು ಸರ್ಕಾರವು ಆಯೋಜಿಸಿತು. ಆದರೆ ಕಾಂಗ್ರೆಸ್ ಅದನ್ನು ಬಹಿಷ್ಕರಿಸಿತು. ಅನಂತರ ಲಾರ್ಡ್. ಇರ್ವಿನನು ಗಾಂಧೀಜಿಯವರನ್ನು ಮಾತುಕತೆಗಾಗಿ ಆಹ್ವಾನಿಸಿದ ಇದರ ಫಲಶ್ರುತಿಯೇ ಗಾಂಧೀ ಇರ್ವಿನ್ ಒಪ್ಪಂದ. ಉಪ್ಪಿನ ಸತ್ಯಾಗ್ರಹದ ಸಂದರ್ಭದಲ್ಲಿ ಬಂಧಿತರಾಗಿದ್ದವರನ್ನೆಲ್ಲ ಈ ಒಪ್ಪಂದದ ಮೇರೆಗೆ ಬಿಡುಗಡೆ ಮಾಡಲಾಯಿತು. ೧೯೩೧ ರಲ್ಲಿ ಲಂಡನ್ನಿನಲ್ಲಿ ನಡೆದ ಎರಡನೇ ದುಂಡು ಮೇಜಿನ ಪರಿಷತ್ತಿನಲ್ಲಿ ಭಾಗವಹಿಸಲು ಗಾಂಧೀಜಿ ಒಪ್ಪಿದರು.

೧೯೩೧ರಲ್ಲಿ ಲಾರ್ಡ್ ವಿಲ್ಲಿಂಗ್ಡನ್ ವೈಸರಾಯನಾದ. ಐದು ವರ್ಷ ಅಧಿಕಾರದಲ್ಲಿದ್ದ. ಗಾಂಧೀಜಿ ಭಾಗವಹಿಸಿದ್ದ ಎರಡನೇ ದುಂಡುಮೇಜಿನ ಪರಿಷತ್ತು ಜಿನ್ನಾರ ಹಟದಿಂದಾಗಿ ಮುರಿದುಬಿತ್ತು. ಮುಸಲ್ಮಾನರನ್ನು ಪ್ರತ್ಯೇಕ ರಾಷ್ಟ್ರವನ್ನಾಗಿ ಪರಿಗಣಿಸಬೇಕೆಂದು ಜಿನ್ನಾ ಹಠ ಮಾಡಿದ್ದರು. ಲಂಡನ್ನಿನಿಂದ ಹಿಂದಿರುಗಿದ ಗಾಂಧೀಜಿಯವರನ್ನು ಬಂಧಿಸಲಾಯಿತು. ಗಾಂಧೀ-ಇರ್ವಿನ್ ಒಪ್ಪಂದದ ಮೇರೆಗೆ ನಿಲ್ಲಿಸಲಾಗಿದ್ದ ಸವಿನಯ ಕಾನೂನುಭಂಗ ಚಳುವಳಿಯನ್ನು ಪುನಃ ಪ್ರಾರಂಭಿಸಲಾಯಿತು. ಒಡೆದು ಆಳುವ ನೀತಿಯನ್ನು ಅನುಸರಿಸುವುದರಲ್ಲಿ ನಿಷ್ಣಾತನಾಗಿದ್ದ ವಿಲ್ಲಿಂಗ್ಡನ್ ಮುಸ್ಲೀಂ, ಯುರೋಪಿಯನ್ ಸಿಖ್ ಮತ್ತು ಹರಿಜನರಿಗೆ ಪ್ರತ್ಯೇಕವಾದ ಚುನಾಯಿತ ಪ್ರತಿನಿಧಿಗಳಿರಬೇಕೆಂಬ ಕೋಮು ಆಧಾರಿತ ತೀರ್ಮಾನವನ್ನು ಕೊಟ್ಟು ಭಾರತೀಯ ಸಮಾಜವನ್ನು ಇನ್ನೂ ಆಳವಾಗಿ ಒಡೆಯಲು ಪ್ರಯತ್ನಿಸಿದ ಈ ತೀರ್ಮಾನದ ವಿರುದ್ಧ ಗಾಂಧೀಜಿ ಆಮರಣ ಉಪವಾಸ ಕೈಗೊಂಡರು. ೧೯೩೨ ರಲ್ಲಿ ಗಾಂಧೀ-ಅಂಬೇಡ್ಕರ್ ಮಧ್ಯ ಆದ ಪುಣೆ ಒಪ್ಪಂದದ ಮೇರೆಗೆ ಹರಿಜನರನ್ನು ಈ ತೀರ್ಮಾನದ ವ್ಯಾಪ್ತಿಯಿಂದ ಹೊರಗೆ ಇಡಲಾಯಿತು. ಅಸ್ಪೃಶ್ಯತೆಯ ನಿವಾರಣಾ ಉದ್ದೇಶದ ಪ್ರಚಾರಕ್ಕಾಗಿ ಗಾಂಧೀಜಿ 'ಹರಿಜನ' ಪತ್ರಿಕೆಯನ್ನು ಪ್ರಾರಂಭಿಸಿದರು. ಲಾರ್ಡ್ ವಿಲ್ಲಿಂಗ್ಡನ್ ಸವಿನಯ ಕಾನೂನು ಭಂಗ ಚಳುವಳಿಯನ್ನು ಹತ್ತಿಕ್ಕಲು ತನ್ನ ಅಧಿಕಾರವನ್ನು ಉಪ

ಯೋಗಿಸಿದ. ಈ ಮಧ್ಯೆ ಮೂರನೇ ದುಂಡುಮೇಜಿನ ಪರಿಷತ್ತು ನಡೆಯಿತು. ಈ ಮೂರೂ ದುಂಡುಮೇಜಿನ ಪರಿಷತ್ತುಗಳು ಹಾಗೂ ಸೈಮನ್ ಆಯೋಗದ ಶಿಫಾರಸ್‌ಗಳನ್ನು ಒಳಗೊಂಡಂತೆ ಬ್ರಿಟಿಷ್ ಪಾರ್ಲಿಮೆಂಟ್ ೧೯೩೫ ರಲ್ಲಿ ಇಂಡಿಯಾ ಎಕ್ಟ್‌ನ್ನು ಅಂಗೀಕರಿಸಿತು.

೧೯೩೬ ರಲ್ಲಿ ಲಾರ್ಡ್ ಲಿನ್‌ಲಿಥಗೋ ವೈಸರಾಯನಾಗಿ ಬಂದ; ಈತನು ೧೯೪೪ ನೇ ಇಸ್ವಿವರೆಗೆ ಅಧಿಕಾರದಲ್ಲಿದ್ದ. ೧೯೩೫ರಲ್ಲಿ ಅಂಗೀಕಾರವಾಗಿದ್ದ ಇಂಡಿಯಾ ಎಕ್ಟ್ ೧೯೩೭ ರಲ್ಲಿ ಜಾರಿಗೆ ಬಂದಿತು ಆಗ ಏಳು ರಾಜ್ಯಗಳಲ್ಲಿ ಚುನಾವಣೆ ನಡೆದು ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬಂತು.೧೯೩೯ ರಲ್ಲಿ ಎರಡನೇ ಮಹಾಯುದ್ಧ ಪ್ರಾರಂಭವಾಯಿತು. ಆಗ ಲಿನ್‌ಲಿಂಥಗೋ ಭಾರತವು ಸಹ ಯುದ್ಧದಲ್ಲಿ ಸೇರಿದ ದೇಶವೆಂದು ಏಕಪಕ್ಷೀಯವಾಗಿ ಘೋಷಿಸಿದ. ಇದನ್ನು ಪ್ರತಿಭಟಿಸಿ ಕಾಂಗ್ರೆಸ್ ಮಂತ್ರಿಮಂಡಳಗಳಿಂದ ಹೊರಗೆ ಬಂದಿತು. ಲಿನ್‌ಲಿಥಗೋ ಭಾರತ ರಕ್ಷಣಾ ನಿಯಮಗಳನ್ನು ಜಾರಿಗೆ ತಂದ. ನಿಯಮ ೪೭ ರ ಮೇರೆಗೆ ಪತ್ರಿಕಾ ಸ್ವಾತಂತ್ರ್ಯ ವನ್ನು ಮೊಕಟುಗೊಳಿಸಿದ. ಕೆಲವು ಪತ್ರಿಕೆಗಳು ತಮ್ಮ ಪ್ರಕಟಣೆಗಳನ್ನು ಸ್ಥಗಿತ ಗೊಳಿಸಿದವು. ಆಗ ಗಾಂಧೀಜಿ "ವ್ಯಕ್ತಿಗತ ಸತ್ಯಾಗ್ರಹ"ವನ್ನು ಪ್ರಾರಂಭಿಸಿದರು. ಕೆಲವೇ ಆಯ್ದ ನಾಯಕರು ಅಹಿಂಸಕವಾಗಿ ವಿರೋಧವನ್ನು ವ್ಯಕ್ತಪಡಿಸಿದರು. ೧೯೪೨ ರಲ್ಲಿ ಜಪಾನ್ ಸಿಂಗಪುರವನ್ನು ಗೆದ್ದು ಭಾರತದತ್ತ ಮುನ್ನುಗ್ಗಿತು. ಕಾಂಗ್ರೆಸ್ ಪಕ್ಷ ರೊಚ್ಚಿಗೆದ್ದಿತು. ಇದೇ ೧೯೪೨ ರಲ್ಲಿ ಗಾಂಧೀಜಿ ತಮ್ಮ ಸುಪ್ರಸಿದ್ಧ "ಭಾರತ ಬಿಟ್ಟು ತೊಲಗಿ" ಚಳುವಳಿಯನ್ನು ಪ್ರಾರಂಭಿಸಿದರು. ಗಾಂಧೀ ಮತ್ತು ಕಾಂಗ್ರೆಸ್‌ನ ನಾಯಕರು ಬಂಧಿಸಲ್ಪಟ್ಟರು. ನಾಯಕತ್ವವಿಲ್ಲದ ಚಳುವಳಿ ಹಿಂಸಾರೂಪ ತಾಳಿತು. ಯುದ್ಧದ ಕೆಲಸಕ್ಕೆ ಭಾರತೀಯರ ಬೆಂಬಲ ಪಡೆಯಲು ಬ್ರಿಟಿಷ್ ಸರ್ಕಾರ ಸರ್ ಸ್ಟ್ಯಾಫೋರ್ಡ್ ಕ್ರಿಪ್ಸರನ್ನು ಕಳುಹಿಸಿತು. ಆದರೆ ಕಾಂಗ್ರೆಸ್ ನಾಯಕರ ಒಪ್ಪಿಗೆ ಪಡೆಯಲು ಕ್ರಿಪ್ಸ್ ವಿಫಲನಾದ. ಇಂಗ್ಲೆಂಡಿನಲ್ಲಿದ್ದ ಚರ್ಚಿಲ್‌ರ ಸರ್ಕಾರದ ಸೂಚನೆಯ ಮೇರೆಗೆ ಲಿನ್‌ಲಿಥಗೋ ವೈಸರಾಯರ ಕಾರ್ಯಕಾರಿ ಸಮಿತಿಯನ್ನು ವಿಸ್ತರಿಸುವ, ಅದರಲ್ಲಿ ಅಲ್ಪಸಂಖ್ಯಾತರ ಅಭಿಪ್ರಾಯಕ್ಕೆ ಹೆಚ್ಚು ಮನ್ನಣೆ ಕೊಡುವ ಮತ್ತು ಯುದ್ಧದ ನಂತರದ ಭಾರತಕ್ಕಾಗಿ ಒಂದು ಹೊಸ ಸಂವಿಧಾನವನ್ನು ರಚಿಸಲು ಪ್ರಾತಿನಿಧಿಕ ಮಂಡಳಿಯನ್ನು ರಚಿಸುವ ಸಲಹೆಯನ್ನು ಮುಂದಿಟ್ಟ. ಆದರೆ ಕಾಂಗ್ರೆಸ್ ಈ ಸಲಹೆಯನ್ನು ತಿರಸ್ಕರಿಸಿ, "ಭಾರತವನ್ನು ಅದರ ಪಾಡಿಗೆ ಬಿಡಿ ಮತ್ತು ಇಲ್ಲಿಂದ ಹೊರಟು ಹೋಗಿ" ಎಂದು ಹೇಳಿತು. ಆದರೆ ಮುಸ್ಲಿಂಲೀಗ್ ಆ ಸಲಹೆಯನ್ನು ಇನ್ನಷ್ಟು ಬಲಪಡಿಸಿಕೊಂಡಿತು.

೧೯೪೪ ರಲ್ಲಿ ಲಾರ್ಡ್ ವಾವೆಲ್ ವೈಸರಾಯನಾಗಿ ಬಂದ; ಈತ ೧೯೪೭ ರ ವರೆಗೆ ಆಡಳಿತ ನಡೆಸಿದ. ಈ ಅವಧಿಯಲ್ಲಿ ೧೯೪೪ ರಲ್ಲಿ ಎರಡನೇ ಮಹಾಯುದ್ಧ ಮುಗಿಯಿತು ಮತ್ತು ೧೯೪೫ ರಲ್ಲಿ ಇಂಗ್ಲೆಂಡಿನಲ್ಲಿ ಚುನಾವಣೆ ನಡೆಯಿತು. ವಿಂಟಸನ್ ಚರ್ಚಿಲ್‌ರ ಕಂಜರವೇಟಿವ್ ಪಕ್ಷ ಸೋತು ಲೇಬರ್ ಪಕ್ಷ ಗೆದ್ದುಬಂದು ಕ್ಲಿಮೆಂಟ್ ಆಟ್ಲೀ ಪ್ರಧಾನಮಂತ್ರಿಯಾದ. ಲಾರ್ಡ್‌ವಾವೆಲ್ ಸಮಸ್ಯೆಯ ಪರಿಹಾರಕ್ಕಾಗಿ ಉತ್ಸುಕನಾಗಿದ್ದ. ಆದ್ದರಿಂದ ೧೯೪೫ ರಲ್ಲಿ ಎಲ್ಲ ಕಾಂಗ್ರೆಸ್ ಹಾಗೂ ಮುಸ್ಲಿಂಲೀಗ್ ನಾಯಕರ ಸಭೆಯನ್ನು ಸಿಮ್ಲಾದಲ್ಲಿ ಕರೆದ. ಈ ಸಭೆಯಲ್ಲಿ ರೂಪಗೊಂಡ ವಾವೆಲ್ ಯೋಜನೆ ಈ ರೀತಿ ಇತ್ತು: ಇಡೀ ಭಾರತಕ್ಕೆ ಅಧೀನ ಸ್ವಾತಂತ್ರ್ಯ ಇರತಕದ್ದು ಮತ್ತು ಕಾರ್ಯಕಾರಿ ಸಮಿತಿಯಲ್ಲಿ ಕೇವಲ ಹಿಂದೂ ಮತ್ತು ಮುಸ್ಲಿಂ ಪ್ರತಿನಿಧಿಗಳು ಸರಿಸಮನಾಗಿ ಇರತಕ್ಕದ್ದು." ಈ ಯೋಜನೆ ರಾಷ್ಟ್ರೀಯ ಆಶೋತ್ತರಕ್ಕೆ ಪೂರಕವಾಗಿಲ್ಲವೆಂದು ಕಾಂಗ್ರೆಸ್ ಅದನ್ನು ತಿರಸ್ಕರಿಸಿತು. ಆಟ್ಲಿ ಪ್ರಧಾನಮಂತ್ರಿಯಾದ ಕೂಡಲೇ ಭಾರತಕ್ಕೆ ಜೂನ್ ೧೯೪೮ ರ ವೇಳೆಗೆ ಸ್ವಾತಂತ್ರ್ಯವನ್ನು ಕೊಡಬೇಕೆಂದು ತೀರ್ಮಾನಿಸಿದ್ದ ಮತ್ತು ಅಷ್ಟರೊಳಗಾಗಿ ಸಂವಿಧಾನ ರಚನೆ ಮುಗಿದಿರಬೇಕೆಂದು ಸೂಚಿಸಿದ್ದ. ಜವಾಹರಲಾಲ್ ನೆಹರೂರವರ ಮುಖಂಡತ್ವದಲ್ಲಿ ೧೯೪೬ ಸೆಪ್ಟೆಂಬರ್ ೨ ರಂದು ಆಂತರಿಕ ಸರ್ಕಾರವನ್ನು ರಚಿಸಲಾಯಿತು. ಮುಸ್ಲಿಂ ಲೀಗ್ ಪ್ರಾರಂಭದಲ್ಲಿ ಹಿಂದುಮುಂದೆ ನೋಡಿ ಕೊನೆಗೆ ಸರ್ಕಾರವನ್ನು ಸೇರಿಕೊಂಡಿತು. ಆದರೆ ಸಂವಿಧಾನ ರಚನಾ ಸಭೆಯನ್ನು ಬಹಿಷ್ಕರಿಸಿತು. ಕಾಂಗ್ರೆಸ್ ಮತ್ತು ಲೀಗ್ ಮಧ್ಯದ ಅಂತರ ಬಹಳ ದೊಡ್ಡದಾದ ಮೇಲೆ ಬ್ರಿಟಿಷ್ ಸರ್ಕಾರ ವಾವೆಲ್‌ರನ್ನು ಹಿಂದಕ್ಕೆ ಕರೆಸಿಕೊಂಡು ಅವನ ಸ್ಥಾನಕ್ಕೆ ಲಾರ್ಡ್ ಲುಯಿಸ್ ಮೌಂಟ್ ಬ್ಯಾಟನನ್ನು ಕಳುಹಿಸಿತು.

೧೯೪೭ ರಲ್ಲಿ ಮೌಂಟ್‌ಬ್ಯಾಟನ್‌ನ ಆಗಮನವಾಯಿತು. ದೇಶದ ವಿಭಜನೆಯ ಸ್ಪಷ್ಟ ಯೋಜನೆಯೊಂದಿಗೆ ಇವನು ಬಂದ. ಕಾಂಗ್ರೆಸ್ ಈ ವಿಭಜನೆಯ ಅನಿವಾರ್ಯತೆಯನ್ನು ಒಪ್ಪುವಂತೆ ತನ್ನ ಎಲ್ಲ ಕುಶಲತೆಯನ್ನು ಉಪಯೋಗಿಸಿದ. ೧೯೪೭ ರಲ್ಲಿ ದೇಶವನ್ನುಭಾರತ, ಪಾಕಿಸ್ತಾನ ಎಂದು ವಿಭಜಿಸುವುದಾಗಿ ಹೇಳಿದ. ಜುಲೈ ತಿಂಗಳಲ್ಲಿ ಬ್ರಿಟಿಷ್ ಪಾರ್ಲಿಮೆಂಟ್ ಭಾರತ ಸ್ವಾತಂತ್ರ್ಯ ಮಸೂದೆಯನ್ನು ಅಂಗೀಕರಿಸಿತು. ಈ ಎರಡೂ ದೇಶಗಳ ಗಡಿಯನ್ನು ಗುರುತಿಸಲು ಸರ್ ಸಿರಿಲ್ ರಾಡ್‌ಕ್ಲಿಫ್ ಅವರನ್ನು ಅಧ್ಯಕ್ಷರನ್ನಾಗಿ ಮಾಡಿತು. ಆಗಸ್ಟ್ ತಿಂಗಳಲ್ಲಿ ರಾಡ್‌ಕ್ಲಿಫ್ ಸಮಿತಿಯು ತನ್ನ ವರದಿಯನ್ನು ಸಲ್ಲಿಸಿತು ಮತ್ತು ಆಗಸ್ಟ್ ೧೪,೧೯೪೭ ರಂದು ಪಾಕಿಸ್ತಾನದ ಸ್ಥಾಪನೆ ಆಯಿತು ಮತ್ತು ಆಗಸ್ಟ್ ೧೫ ರಂದು ಭಾರತದ ಸ್ಥಾಪನೆ ಆಯಿತು. ಮೌಂಟಬ್ಯಾಟನ್‌ರ ಪದನಿಮಿತ್ತ ಸ್ಥಾನವು ಭಾರತದ ಗವರ್ನರ್-ಜನರಲ್

ಎಂದಾಯಿತು. ಸ್ವತಂತ್ರ ಭಾರತದ ಸ್ವರೂಪದ ರಚನೆಯ ಪ್ರಾರಂಭಿಕ ವರ್ಷಗಳಲ್ಲಿ ನೆಹರೂ ಮತ್ತು ವಲ್ಲಭಾಯಿ ಪಟೇಲರಿಗೆ ಮೌಂಟಬ್ಯಾಟನ್ ಸಹಾಯವಿತ್ತ. ೧೯೪೮ ಜುಲೈನಲ್ಲಿ ಮೌಂಟಬ್ಯಾಟನ್ ಭಾರತಕ್ಕೆ ವಿದಾಯ-ಹೇಳಿ ಇಂಗ್ಲೆಂಡಿಗೆ ಮರಳಿ ಹೋದ.

ಚಕ್ರವರ್ತಿ ರಾಜಗೋಪಾಲಾಚಾರಿ ಗವರ್ನರ್ ಜನರಲ್ ಆಗಿ ಮೌಂಟ್‌ಬ್ಯಾಟನ್ನರ ಸ್ಥಾನಕ್ಕೆ ಬಂದರು. ತಮ್ಮ ಕುಶಾಗ್ರ ಬುದ್ಧಿಯಿಂದ ಆ ಸ್ಥಾನವನ್ನು ಬಹಳ ಘನಗಾಂಭೀರ್ಯದಿಂದ ನಿರ್ವಹಿಸಿದರು. ೧೯೫೦ ಜನವರಿ ೨೬ ರಂದು ಭಾರತ ಗಣರಾಜ್ಯವಾಗಿ ಹೊರಹೊಮ್ಮಿತು. ಸಂವಿಧಾನ ಸಭೆಯ ಅಧ್ಯಕ್ಷರಾಗಿದ್ದ ಬಾಬು ರಾಜೇಂದ್ರ ಪ್ರಸಾದ್ ಗಣರಾಜ್ಯದ ಮೊದಲ ಅಧ್ಯಕ್ಷರಾದರು. ಇವರು ಎರಡು ಬಾರಿ ಮಂತ್ರಿಮಂಡಳದ ಸಲಹೆ ಪಡೆಯುವ ಉತ್ತಮ ಕ್ರಮವನ್ನು ಜಾರಿಗೆ ತಂದರು. ಹಿಂದೂ ಕೋಡ್‌ಬಿಲ್‌ಗೆ ತಮ್ಮ ಒಪ್ಪಿಗೆ ಕೊಡುವ ಮುನ್ನ ತಮ್ಮ ಅಧಿಕಾರವನ್ನು ಉಪಯೋಗಿಸಿದರು ಮತ್ತು ಅವರ ಮರು ಪರಿಶೀಲನೆಗೆ ಒತ್ತಾಯಿಸಿದರು.

೧೯೬೨ ರಲ್ಲಿ ಸರ್ವಪಳ್ಳಿ ರಾಧಾಕೃಷ್ಣನ್ ಎರಡನೇ ಅಧ್ಯಕ್ಷರಾಗಿ ಆಯ್ಕೆಯಾದರು. ಈ ಮೊದಲು ಅವರು ಎರಡು ಬಾರಿ ಉಪಾಧ್ಯಕ್ಷರಾಗಿ ಆಯ್ಕೆಯಾಗಿದ್ದರು. ಅವರು ತತ್ವಜ್ಞಾನಿ ರಾಜನೀತಿಜ್ಞನಾಗಿ ಕಾರ್ಯನಿರ್ವಹಿಸಿದರು. ಅವರ ಅಧಿಕಾರಾವಧಿಯಲ್ಲಿ ಪ್ರಧಾನ ಮಂತ್ರಿಗಳಾಗಿದ್ದ ನೆಹರು, ಲಾಲ್‌ಬಹಾದ್ದೂರ್ ಶಾಸ್ತ್ರಿ ಮತ್ತು ಇಂದಿರಾ ಗಾಂಧೀ ಅವರಿಗೆ ಮಾರ್ಗದರ್ಶನ ನೀಡಿದರು.

೧೯೬೭ ರಲ್ಲಿ ಝಾಕೀರ್ ಹುಸೈನ್ ಅಧ್ಯಕ್ಷರಾದರು. ಆದರೆ ಅಧಿಕಾರದಲ್ಲಿದ್ದಾಗಲೇ ತೀರಿಕೊಂಡರು. ಇವರ ಅಧಿಕಾರವಧಿ ಕಡಿಮೆ ಇದ್ದರೂ ಸಹ ಗಾಂಧೀ ವಿಚಾರದ ಈ ವ್ಯಕ್ತಿ ತನ್ನ ಕರ್ತವ್ಯಗಳನ್ನು ಯೋಗ್ಯರೀತಿಯಲ್ಲಿ ನಿರ್ವಹಿಸಿದರು.

ಇಂದಿರಾ ಗಾಂಧೀಯವರ ಬೆಂಬಲದೊಂದಿಗೆ ವರಾಹಗಿರಿ ವೆಂಕಟಗಿರಿ ನಾಲ್ಕನೇಯ ಅಧ್ಯಕ್ಷರಾದರು. ಪ್ರಧಾನಿ ಇಂದಿರಾ ಗಾಂಧೀ ಹೇಳಿದಂತೆ ಕೇಳುವ ಉತ್ಸಾಹದ ಕಾರಣದಿಂದಾಗಿ ಇವರನ್ನು 'ರಬ್ಬರ್ ಸ್ಟ್ಯಾಂಪ್" ಅಧ್ಯಕ್ಷರೆಂದೇ ರಾಜನ ಕರೆದರು. ಗಿರಿ ವಿದೇಶದಲ್ಲಿ ಪ್ರವಾಸ ಇದ್ದಾಗ ಉತ್ತರ ಪ್ರದೇಶದ ಚರಣಸಿಂಗರ್ ಸರ್ಕಾರವನ್ನು ತೆಗೆದುಹಾಕುವ ಆದೇಶಕ್ಕೆ ಹಸ್ತಾಕ್ಷರ ಹಾಕಿದ್ದಕ್ಕಾಗಿ ಅವರು ಟೀಕಿಸಲ್ಪಟ್ಟರು.

ಗಿರಿಯವರ ನಂತರ ಫಕ್ರುದ್ದೀನ್ ಅಲಿ ಅಹಮ್ಮದ ಅಧ್ಯಕ್ಷರಾದರು. ಇವರು ಸಹ ಅಧಿಕಾರದಲ್ಲಿದ್ದಾಗ ಮರಣಹೊಂದಿದರು. ಇವರು ಇಂದಿರಾ ಗಾಂಧೀಯವರ ಕಟ್ಟಾ ಅನುಯಾಯಿಯಾಗಿದ್ದರಿಂದ ೧೯೭೫ರಲ್ಲಿ ಮಂತ್ರಿ ಮಂಡಲದ ಠರಾವು ಇಲ್ಲದೆಯೇ ತುರ್ತುಪರಿಸ್ಥಿತಿಯ ಘೋಷಣೆಯ ಮೇಲೆ ತಮ

ಹಸ್ತಾಕ್ಷರ ಹಾಕಿದರು. ಆಗ ಉಪಾಧ್ಯಕ್ಷರಾಗಿದ್ದ ಬಸಪ್ಪ ದಾನಪ್ಪ ಜತ್ತಿ ೧೯೭೭ರ ಚುನಾವಣೆಯಲ್ಲಿ ಇಂದಿರಾ ಗಾಂಧೀ ಸೋಲುವ ವರೆಗೆ ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸಿದರು.

ಜನತಾ ಪಕ್ಷ ಅಧಿಕಾರಕ್ಕೆ ಬಂತು. ಸರ್ವಾನುಮತದಿಂದ ನೀಲಂ ಸಂಜೀವ ರೆಡ್ಡಿಯವರನ್ನು ಅಧ್ಯಕ್ಷರನ್ನಾಗಿ ಆಯ್ಕೆ ಮಾಡಲಾಯಿತು. ಅವರು ಅನೇಕ ನೀತಿನಿರ್ಧಾರಕ ವಿಷಯಗಳಲ್ಲಿ ಬಿಗಿ ನಿಲುವು ತಾಳುತ್ತಿದ್ದರು. ಆದ್ದರಿಂದ ಅನೇಕ ಬಾರಿ ಪ್ರಧಾನಮಂತ್ರಿ ಮೊರಾರಜಿ ದೇಸಾಯಿಯವರೊಂದಿಗೆ ಘರ್ಷಣೆಗೆ ಇಳಿಯುತ್ತಿದ್ದರು. ಸ್ವತಃ ಜನತಾಪಕ್ಷದ ನಾಯಕರಾಗಿದ್ದರೂ ಸಹ ಮೊರಾರ್ಜಿ ಯವರ ಅಧಿಕಾರಾವಧಿ ಮೊಟಕುಗೊಂಡಾಗ ಸಹಕರಿಸಲಿಲ್ಲ. ಅಲ್ಪಮತದ ಚರಣಸಿಂಗ್ ಪ್ರಧಾನ ಮಂತ್ರಿಯಾಗುವಂತೆ ಅನುಮತಿಕೊಟ್ಟರು. ೧೯೮೦ರಲ್ಲಿ ಇಂದಿರಾ ಗಾಂಧೀ ಪುನಃ ಅಧಿಕಾರಕ್ಕೆ ಬಂದಾಗ ಸಂಜೀವ ರೆಡ್ಡಿ ಸುಲಭವಾಗಿ ತಮ್ಮ ಅಧಿಕಾರಾವಧಿಯನ್ನು ಮುಗಿಸಿದರು.

೧೯೮೨ ರಲ್ಲಿ ಈ ಉನ್ನತ ಹುದ್ದೆಗೆ ಏರಿದ ಗ್ಯಾನಿ ಜೈಲಸಿಂಗ್ ಕೂಡ ಇಂದಿರಾ ಗಾಂಧೀಯವರ ನಿಷ್ಠೆಯ ವ್ಯಕ್ತಿಯಾಗಿದ್ದರು. ಅಮೃತಸರದ ಸ್ವರ್ಣ ಮಂದಿರದಲ್ಲಿ ಇಂದಿರಾ ಗಾಂಧೀ ಸೈನಿಕಕ್ರಮವನ್ನು ನಡೆಸಿದರೂ ಸಹ ಪ್ರತಿಭಟಿಸ ಲಿಲ್ಲ; ಶಾಂತಿ ಸಹನೆಯಿಂದಿರಲು ವಿನಂತಿಸಿದರು, ಇಂದಿರಾ ಗಾಂಧೀಯವರ ಹತ್ಯೆಯ ನಂತರ ಅವರ ಮಗ ರಾಜೀವ ಗಾಂಧೀಯವರನ್ನು ಒಮ್ಮೆಲೆ ಪ್ರಧಾನ ಮಂತ್ರಿಯನ್ನಾಗಿ ನಿಯುಕ್ತಿ ಮಾಡಿದರು. ಮುಂದೆ ರಾಜೀವ ಗಾಂಧೀಯವರ ಜೊತೆ ಭಿನ್ನಾಭಿಪ್ರಾಯ ಉಂಟಾದರೂ ಯಾವುದೇ ಮನಸ್ತಾಪ ಉಂಟಾಗದಂತೆ ನಡೆದುಕೊಂಡರು.

೧೯೮೭ ರಲ್ಲಿ ರಾಮಸ್ವಾಮಿ ವೆಂಕಟರಾಮನ್ ರಾಷ್ಟ್ರಪತಿ ಭವನವನ್ನು ಪ್ರವೇಶಿಸಿದರು. ಇವರು ನಿಯಮಗಳಿಗನುಸಾರವಾಗಿ ಕೆಲಸಮಾಡುವ ಅಧ್ಯಕ್ಷ ರೆನಿಸಿಕೊಂಡರು. ವಿ.ಪಿ.ಸಿಂಗ್, ಚಂದ್ರಶೇಖರ್ ಅಥವಾ ಪಿ.ವಿ. ನರಸಿಂಹರಾವ್ ಅವರನ್ನು ಪ್ರಧಾನಮಂತ್ರಿಯಾಗಲು ಆಹ್ವಾನಿಸುವಾಗ ಸಂವಿಧಾನದ ನಿಯಮ ವನ್ನು ಪಾಲಿಸಿ ಯುಕ್ತವಾದ ಉದಾಹರಣೆಯನ್ನು ಸ್ಥಾಪಿಸಿದರು.

೧೯೯೨ ರಲ್ಲಿ ಶಂಕರ ದಯಾಲ್ ಶರ್ಮಾ ಅಧ್ಯಕ್ಷರಾದರು. ಇವರು ಸಹ ಹಿಂದಿನ ಅಧ್ಯಕ್ಷರ ದಾರಿಯನ್ನೇ ಅನುಸರಿಸಿದರು.

ಈಗಿನ ಹತ್ತನೇ ಅಧ್ಯಕ್ಷರಾದ ಕೆ.ಆರ್. ನಾರಾಯಣನ್ ದೇಶದ ಆಡಳಿತದ ಚಕ್ಕಾಣಿಯನ್ನು ಹಿಡಿದಿದ್ದಾರೆ. ರಾಜತಂತ್ರಜ್ಞನಾಗಿ ಕೆಲಸ ಮಾಡಿದ ಅನುಭವದ ಕಾರಣದಿಂದ ತಮ್ಮ ಅಧಿಕಾರಕ್ಕೆ ಮೆರಗು ತಂದಿದ್ದಾರೆ. ಅವರು ದಲಿತ ಸಮುದಾ ಯಕ್ಕೆ ಸೇರಿದವರೆಂಬುದು ಕೇವಲ ಆಕಸ್ಮಿಕ. ★ (ಅನುಃ ಸುಕೌ ಹಿಂದೂ ಸಭಾರ)

ಅಫಘಾನ ಯುದ್ಧ ೫ ನೇ ಪುಟದಿಂದ

ಬಲಶಾಲಿಯಾದ, ವಿನಾಶಕಾರಿಯಾದ ಶಸ್ತ್ರಾಸ್ತ್ರಗಳ ಸಂಗ್ರಹವಿರುವಾಗ, ನಡೆಯುತ್ತಿದೆ. ಎರಡನೇ ಮಹಾಯುದ್ಧದಲ್ಲಿದ್ದ ಶಸ್ತ್ರಾಸ್ತ್ರಗಳ ಪ್ರಮಾಣ ಮತ್ತು ಶಕ್ತಿಗೂ ಇಂದಿರುವ ಶಸ್ತ್ರಾಸ್ತ್ರಗಳ ಪ್ರಮಾಣ ಮತ್ತು ಶಕ್ತಿಗೂ ಬಹಳಷ್ಟು ಅಂತರವಿದೆ. ಯಾವುದೇ ಒಂದು ರಾಜಕೀಯ ತಪ್ಪಿನಿಂದ ಅಫಘಾನ ಯುದ್ಧವು ಮೂರನೇ ಮಹಾಯುದ್ಧದಲ್ಲಿ ಪರಿವರ್ತಿತಗೊಂಡರೆ ಪ್ರಪಂಚದ ವಿನಾಶ ಖಂಡಿತ. ಆದ್ದರಿಂದ ಅಂಥ ಮಹಾದುರಂತ ಸಂಭವಿಸುವುದನ್ನು ತಪ್ಪಿಸಲು ಪ್ರಪಂಚದ ಎಲ್ಲ ರಾಷ್ಟ್ರಗಳ ರಾಜಕೀಯ ನಾಯಕರು, ವಿಜ್ಞಾನಿಗಳು, ಅರ್ಥಶಾಸ್ತ್ರಜ್ಞರು ಭೌಗೋಳಿಕ ತಜ್ಞರು ಮತ್ತು ಇತರ ಕ್ಷೇತ್ರಗಳಲ್ಲಿಯ ತಜ್ಞರು ಸೇರಿ ವಿಶ್ವಶಾಂತಿಯ ಸ್ಥಾಪನೆಯತ್ತ ತೀವ್ರತಮವಾದ ಸಂಶೋಧನೆಯನ್ನು ನಡೆಸುವುದು ಅತ್ಯಗತ್ಯವಾಗಿದೆ. ★

KA-SKMND-470/-2000.

ಕರದ .ಅಂಚೆ

Regd No. KAR/KAN/2000/3820

Vol 2 Issue ,4

Janapada Vichara – Kannada Monthly Digest Edited and Printed by Surendra Koulagi at Janapada Seva Trust Printing Press, Melkote on behalf of Janapada Seva Trust, (Regd) Melkote, Dist – Mandya 571 431.

Phone ; 08236/48754